ಅಖಿಲ ಕರ್ನಾಟಕ
# ಶಿಕ್ಷಕ ಸಮಾಚಾರ
ಮೇ 2023 ಮಾಸ ಪತ್ರಿಕೆ

ಸಂಪುಟ/Volume : 45
ಸಂಚಿಕೆ/Issue : 8
ಪುಟ/Pages : 12
ಬೆಲೆ/Price : ₹ 15/–

Akhila Karnataka Shikshaka Samachar | May 2023 | Monthly



## ಶಿಕ್ಷಣದ ದೃಷ್ಟಿಕೋನ
# ಗುಣಾತ್ಮಕ ಶಿಕ್ಷಣ
## 2023-24

A Journal of Karnataka Rajya Madhyamika Shikshaka Sangha (R.)

## ಸಂಪಾದಕೀಯ

ಈ ಬೇಸಿಗೆ ರಜೆಯ ಕೊನೆಯ ಭಾಗದಲ್ಲಿ ನಾವಿದ್ದೇವೆ. ಎಸ್.ಎಸ್.ಎಲ್.ಸಿ ಮತ್ತು ಪಿ ಯು ಸಿ ಪರೀಕ್ಷೆ ಹಾಗೂ ಮೌಲ್ಯಮಾಪನ ಮುಕ್ತಾಯಗೊಳಿಸುವ ಮಧ್ಯದಲ್ಲಿಯೇ ಕರ್ನಾಟಕ ವಿಧಾನ ಸಭೆಯ ಚುನಾವಣೆಯ ತರಬೇತಿಗಳು ತದನಂತರ ಚುನಾವಣಾ ಕಾರ್ಯ, ಹೀಗೆ ಎಲ್ಲವನ್ನೂ ಮುಕ್ತಾಯಗೊಳಿಸಿದೆವು ಅನ್ನುವಷ್ಟರಲ್ಲಿ ಶಾಲೆಯ ಪ್ರಾರಂಭೋತ್ಸವ ಬಂದೇ ಬಿಟ್ಟಿದೆ.

ಶಾಲಾ ಶಿಕ್ಷಣ ಇಲಾಖೆ ಮುಂದಿನ ವರ್ಷ 'ಗುಣಾತ್ಮಕ ಶಿಕ್ಷಣ'ದ ವರ್ಷವಾಗಿರಬೇಕೆಂದು ಯೋಚಿಸಿ, 240 ಪುಟಗಳ 2023-24ರ ಶೈಕ್ಷಣಿಕ ಮಾರ್ಗಸೂಚಿಯನ್ನು ಹೊರತಂದಿದೆ. ಶೈಕ್ಷಣಿಕ ಮತ್ತು ಆಡಳಿತಾತ್ಮಕ ಎರಡೂ ವಿಷಯಗಳಿಗೆ ಸಂಪನ್ಮೂಲವಾಗಿ ಈ ಮಾರ್ಗಸೂಚಿ ನಮ್ಮೆಲ್ಲರ ಕೈಸೇರಿದೆ. ಶೈಕ್ಷಣಿಕ ಸುಗಮಕಾರರಾಗಿ ಮಕ್ಕಳ ಭವಿಷ್ಯ ರೂಪಿಸುವುದಕ್ಕಾಗಿ ಹೊಸ ಆಲೋಚನೆಗಳು, ವಿನೂತನ ಪ್ರಯೋಗಗಳು ನಮ್ಮ ನಮ್ಮ ವಿಷಯಗಳಲ್ಲಿ ನಡೆದ ಹೊಸ ಸಂಶೋಧನೆಗಳನ್ನು ತಿಳಿದುಕೊಂಡು ಮುಂದಿನ ಭಾರತದ ಭವಿಷ್ಯ ರೂಪಿಸುವ ವಿದ್ಯಾರ್ಥಿಗಳನ್ನು ತಯಾರಿಸಲು ತಾವೆಲ್ಲರೂ ಸಿದ್ಧತೆ ಮಾಡಿಕೊಳ್ಳುವ ರಚನಾತ್ಮಕ ಶಿಕ್ಷಕರು ತಾವಾಗುವಿರಿ ಎನ್ನುವ ನಿರೀಕ್ಷೆಯು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ್ದು.

ಕರೋನಾ ಸಂಕಷ್ಟ ಕಾಲದ ನಂತರ ಯಾವುದೇ ಆತಂಕವೂ ಇಲ್ಲದೆ ಈ ಶೈಕ್ಷಣಿಕ ವರ್ಷ ಪ್ರಾರಂಭವಾಗುತ್ತಿರುವ ಈ ಕಾಲಘಟ್ಟದಲ್ಲಿ ನಮ್ಮೆಲ್ಲರ ತಯಾರಿ ಶೈಕ್ಷಣಿಕ ಬೆಳವಣಿಗೆಗೆ ಪೂರಕವಾಗಿರಲಿ.

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ನಮ್ಮ ಸಂಸ್ಕೃತಿ ಹಾಗೂ ಶಿಕ್ಷಣ 3
- ಎಸ್.ಎಸ್.ಎಲ್.ಸಿ ನಂತರದ ಅಧ್ಯಯನ ವಿಷಯಗಳು ಯಾವುದಿರಬಹುದು? 5
- ಸರಸ್ವತಿಬಾಯಿರಾಜವಾಡೆ 6
- ಬೇಸಿಗೆ ರಜೆಯ ಸದುಪಯೋಗ... ಹೇಗೆ? 7
- ಅಡುಗೆ ಮನೆಯಲ್ಲಿ ರಸಾಯನಶಾಸ್ತ್ರ 8
- ಏಕಾತ್ಮತಾ ಸ್ತೋತ್ರ 9
- ಸಂಸ್ಕೃತಿಯ ನಿಜಾರ್ಥ 11
- ಮನವಿ 12

# ನಮ್ಮ ಸಂಸ್ಕೃತಿ ಹಾಗೂ ಶಿಕ್ಷಣ

'ಶಿಕ್ಷಣ ದೃಷ್ಟಿ' ಪುಸ್ತಕದ ಆಯ್ದ ಲೇಖನ
ಸಂಗ್ರಾಹಕರು– **ಹೆಚ್. ನಾಗಭೂಷಣ ರಾವ್**

ಶಿಕ್ಷಣವು ಮಗುವಿನ ಸರ್ವಾಂಗೀಣ ವಿಕಾಸದ ಪ್ರಕ್ರಿಯೆ. ಜೀವನದಲ್ಲಿ ವ್ಯಕ್ತಿ ಏನೆಲ್ಲ ಸಾಧನೆ ಮಾಡಬಹುದೋ ಅದೆಲ್ಲ ಶಿಕ್ಷಣದ ಮೂಲಕವೇ ಸಾಧಿಸಲು ಸಾಧ್ಯ. ರಾಷ್ಟ್ರಜೀವನದಲ್ಲಿ ನಾವು ಅಂಗೀಕರಿಸಿದ ಆದರ್ಶಗಳು ಹಾಗೂ ಮೌಲ್ಯಗಳು ಶಿಕ್ಷಣದ ಆದರ್ಶಗಳು ಹಾಗೂ ಮೌಲ್ಯಗಳಾಗಿವೆ. ಪ್ರಾಚೀನ ಮಹಾನ್ ಸಂಸ್ಕೃತಿಯ ಉತ್ತರಾಧಿಕಾರಿಯಾಗಿರುವ ಭಾರತವು ಅನುಭವದ ದೀರ್ಘಕಾಲೀನ ಯಾತನೆಯ ಸತ್ಯಗಳ ಆಧಾರದ ಮೇಲೆಯೇ ಶ್ರೇಷ್ಠ ಜೀವನ ಮೌಲ್ಯಗಳು ವಿಕಸಿತವಾದುವು. ಭಾರತೀಯ ಜೀವನ ಸತ್ಯಗಳೇ ಭಾರತೀಯ ಶಿಕ್ಷಾ ಶಾಸ್ತ್ರಕ್ಕೆ ಮೂಲಾಧಾರವಾಗಿವೆ. ಈ ಆಧಾರಗಳ ಮೇಲೆ ವಿಕಸಿತ ಶಿಕ್ಷಣವೇ ಭಾರತೀಯ ಜೀವನಕ್ಕೆ ಮೂಲಾಧಾರ. ಈ ರೀತಿಯ ಭಾರತೀಯ ಜೀವನದ ಸತ್ಯಗಳಾವುವೆಂಬುದನ್ನು ನೆನಪಿಗೆ ತಂದುಕೊಳ್ಳೋಣ.

## ಅದ್ವೈತ ತತ್ವ

ಭಾರತದ ಪ್ರಾಚೀನ ಋಷಿವರೇಣ್ಯರು ಸಮಸ್ತ ಸೃಷ್ಟಿಯ ಅನ್ವೇಷಣೆ ಮಾಡಿ 'ಸಮಸ್ತ ಚರಾಚರ ಜಗತ್ತಿನ ಅಧಿಷ್ಠಾನ ಸ್ವರೂಪ ಒಂದು ಅವಿನಾಶೀ ಪರಮ ಚೇತನ ತತ್ವವು ಪ್ರಾಪ್ತವಾಗಿದೆ' ಎಂಬ ಮೂಲ ತತ್ತ್ವವನ್ನು ಕಂಡುಕೊಂಡರು. 'ಈಶಾವಾಸ್ಯ ಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್' ಎಂಬ ಈಶಾವಾಸ್ಯ ಉಪನಿಷತ್ತಿನ ಮಂತ್ರ ನಮಗೆ ಚರಾಚರ ಜಗತ್ತಿನಲ್ಲಿ ಸರ್ವತ್ರ ಈಶ್ವರ ವ್ಯಾಪ್ತವಾಗಿರುವನೆಂಬ ಸತ್ಯವನ್ನು ಅರುಹುತ್ತದೆ. ಈ ಪರಮಾತ್ಮನಿಂದ ಜಗತ್ತಿನ ಸೃಷ್ಟಿಯಾಯಿತು. "ಈ ಗತಿಶೀಲ ಆತ್ಮತತ್ವದ ಚಟುವಟಿಕೆಯಿಂದಾಗಿ ಈ ಸೃಷ್ಟಿ ಅಸ್ತಿತ್ವಕ್ಕೆ ಬಂದಿದೆ. ಸೂಕ್ಷ್ಮದಿಂದ ಬ್ರಹ್ಮಾಂಡದವರೆಗೆ ಎಲ್ಲವೂ ಈ ಆತ್ಮತತ್ವದ ಬಗೆ ಬಗೆಯ ಸಂರಚನೆಯಲ್ಲದೆ ಮತ್ತೇನೂ ಅಲ್ಲ ಎಂದು ಈ ಚೇತನ ತತ್ವವು ಜಡತ್ವದಿಂದ ತನ್ನನ್ನು ಮೆಲ್ಲಮೆಲ್ಲಗೆ ಉತ್ಕ್ರಾಂತಿದ್ವಾರಾ ಮುಕ್ತನಾಗಲು ಬಯಸುವುದೋ ಆಗ ಆ ಪ್ರಾಣ ತನ್ನ ಅಂತಃಕ್ರಾಂತಿಯ ಪ್ರಕ್ರಿಯೆಯಿಂದಾಗಿ ಸಾಧಾರಣ ಮಾನವನಿಗಿಂತಲೂ ಎಷ್ಟೋ ಪಟ್ಟು ವಿಕಸಿತ ಜೀವನವನ್ನು ಪ್ರಕಟಿಸುತ್ತದೆ, ಎಂಬುದು ಶ್ರೀ ಅರವಿಂದರ ಅಭಿಪ್ರಾಯ, ಈ ಪ್ರಕ್ರಿಯೆಯೇ ಶಿಕ್ಷಣ.

'ಆತ್ಮವತ್ ಸರ್ವಭೂತೇಷು' ಎಂಬುದು ಭಾರತೀಯ ಆಧ್ಯಾತ್ಮಿಕ ದೃಷ್ಟಿಯಾಗಿದೆ. ಈ ನಂಬಿಕೆಯ ತಳಹದಿಯ ಮೇಲೆ 'ವಸುಧೈವ ಕುಟುಂಬಕಂ' ಎಂಬ ಭಾವನೆಯನ್ನು ಪ್ರತಿಯೊಬ್ಬ ಮಾನವನ ಅಂತಃಕರಣದಲ್ಲಿ ವಿಕಸಿತಗೊಳಿಸುವುದು ಶಿಕ್ಷಣದ ಗುರಿ.

## ಕರ್ಮವಾದ

ಭಾರತೀಯ ಜೀವನದರ್ಶನದ ಆಧಾರಭೂತವಾದ ಎರಡನೇ ತತ್ವವೆಂದರೆ ಕರ್ಮವಾದ. ಕೈವಲ್ಯ ಪ್ರಾಪ್ತಿಯೇ ಜೀವನದ ಲಕ್ಷ್ಯವಾಗಿದ್ದು ಅದನ್ನು ಸಾಧಿಸಲು ಮಾನವ ಸದಾ ಕರ್ಮಾನುಷ್ಠಾನವನ್ನು ಮಾಡುತ್ತಲೇ ಇರಬೇಕಾಗುತ್ತದೆ. ಈ ಗುರಿ ಸಾಧನೆ ಆಗುವ ತನಕ ಹುಟ್ಟು ಸಾವುಗಳನ್ನು ಅನುಭವಿಸುತ್ತಲೇ ಇರಬೇಕಾಗುತ್ತದೆ. ಈ ಪುನರ್ಜನ್ಮ ಸಿದ್ಧಾಂತವು ಭಾರತೀಯ ದರ್ಶನದ ಕೇವಲ ನಂಬಿಕೆಯಲ್ಲ. ಅದು ವೈಜ್ಞಾನಿಕ ಸತ್ಯವೆಂದು ಸಿದ್ಧವಾಗಿದೆ. ಪಾಶ್ಚಾತ್ಯರು ಈ ತತ್ವವನ್ನು ಒಪ್ಪುವುದಿಲ್ಲ. ಆದರೆ ವೈಜ್ಞಾನಿಕ ಸತ್ಯವೆಂದು ಸಿದ್ಧವಾಗಿದೆ. ಆದರೆ ಅಮೆರಿಕದ ಓರ್ವ ವಿಜ್ಞಾನಿ ಸುಮಾರು 1200 ಪುನರ್ಜನ್ಮ ಘಟನೆಗಳ ಅನುಭವವನ್ನು ಹಲವು ಪಾಶ್ಚಾತ್ಯ ದೇಶಗಳಲ್ಲಿ ಅಧ್ಯಯನ ಮಾಡಿ ತನ್ನ ಅನುಭವಗಳನ್ನು ಸಮಾಚಾರ ಪತ್ರವೊಂದರ ಮೂಲಕ ಪ್ರಕಟಿಸಿದ್ದಾರೆ.

ಉತ್ತಮವಾದ ಕರ್ಮವನ್ನು ಮಾಡಿದರೆ ಉತ್ತಮ ಫಲ ಪ್ರಾಪ್ತಿಯಾಗುತ್ತದೆ. ಅದರಂತೆ ದುಷ್ಕರ್ಮಗಳನ್ನು ಮಾಡುತ್ತಾ ಬಂದರೆ ದುಷ್ಪರಿಣಾಮಗಳೇ ಕ್ರೋಢೀಕೃತವಾಗಿ ಪುನರ್ಜನ್ಮಗಳನ್ನು ಅವ್ಯಾಹತವಾಗಿ ಪಡೆಯುತ್ತಿರಬೇಕಾಗುತ್ತದೆ.

## ಜೀವನದ ಲಕ್ಷ್ಯ

ಸಮಸ್ತ ಚರಾಚರ ಜಗತ್ತನ್ನು ವ್ಯಾಪಿಸಿರುವ ಒಂದು ಶಾಶ್ವತ ಚೇತನ ಪರಮಾತ್ಮ ತತ್ವ ಅದು ಮಾನವನಲ್ಲಿ ಆತ್ಮದ ರೂಪದಲ್ಲಿ ಅಭಿವ್ಯಕ್ತವಾಗಿದೆ. ಈ ಪರಮ ತತ್ವದ ಅನುಭೂತಿಯನ್ನು ಪಡೆಯುವುದು ಮತ್ತು ಜೀವನದಲ್ಲಿ ಅದನ್ನು ಸಾಕ್ಷಾತ್ಕರಿಸುವುದು ಮಾನವ ಜೀವನದ ಲಕ್ಷ್ಯ. ಸ್ವಾಮಿ ವಿವೇಕಾನಂದರ ಮಾತಿನಲ್ಲಿ ಹೇಳುವುದಾದರೆ, "ಪ್ರತಿಯೊಂದು ಆತ್ಮವು ಅವ್ಯಕ್ತಬ್ರಹ್ಮವೇ. ಹೊರ ಹಾಗೂ ಒಳಗಿನ ಪ್ರಕೃತಿಗಳನ್ನು ನಿಯಂತ್ರಿಸಿ ಈ ಅಂತರ್ನಿಹಿತ ಬ್ರಹ್ಮ ಸ್ವರೂಪವನ್ನು ಅಭಿವ್ಯಕ್ತಗೊಳಿಸುವುದೇ ಜೀವನದ ಲಕ್ಷ್ಯ." ಶ್ರೀ ಅರವಿಂದರು ಈ ಸತ್ಯವನ್ನು ಅವರದೇ ಆದ ರೀತಿಯಲ್ಲಿ ಹೇಳಿದ್ದಾರೆ. "ಭಾಗವತ ಉಪಸ್ಥಿತಿಯಲ್ಲಿ □ ಚೇತನದಲ್ಲಿ ಪ್ರವೇಶಿಸುವುದು ಜೀವನದ ಲಕ್ಷ್ಯವಾಗಿದೆ ಮತ್ತು ಭಗವಂತನಲ್ಲಿ ಪ್ರೇಮವನ್ನು ಬೆಳೆಸುವುದು, ತನ್ನ ಪ್ರಕೃತಿಯನ್ನು ಭಗವಂತನ ಪ್ರಕೃತಿಯೊಂದಿಗೆ ಶ್ರುತಿಗೂಡಿಸುವುದು ಹಾಗೂ ತನ್ನ ಕಾರ್ಯ ಹಾಗೂ ಜೀವನವನ್ನೇ ಭಗವಂತನ ನಿಯಂತ್ರಣಕ್ಕೆ ಒಪ್ಪಿಸಿಬಿಡುವುದು ಜೀವನದ ಲಕ್ಷ್ಯ

ಶ್ರೀ ಗುರೂಜಿಯವರು ಈ ಸತ್ಯವನ್ನು ಅವರದೇ ಆದ ಸುಲಭವಾದ ಭಾಷೆಯಲ್ಲಿ ಈ ರೀತಿ ವರ್ಣಿಸಿದ್ದಾರೆ. "ಸಮಾಜವೇ ಆ ಅವ್ಯಕ್ತ ಬ್ರಹ್ಮನ ವಿಶಾಲ ಹಾಗೂ ವಿರಾಟ್ ವ್ಯಕ್ತ ರೂಪ. ಆದ್ದರಿಂದ ಮಾನವ ತನ್ನ ಜೀವನವನ್ನು ಪರಮೇಶ್ವರ ಸ್ವರೂಪವಾದ ಈ ಸಮಾಜದ ಸೇವೆಯಲ್ಲಿ ಸಂಪೂರ್ಣವಾಗಿ ಸಮರ್ಪಿಸಬೇಕು. ಇದೇ ಜೀವನದ ಲಕ್ಷ್ಯ". ಈ ಉದಾತ್ತ ಗುರಿಯೇ ಮನುಷ್ಯನನ್ನು ಮನುಷ್ಯನನ್ನಾಗಿ ಮಾಡುತ್ತದೆ. ಆಹಾರ, ನಿದ್ರೆ, ಭಯ, ಮೈಥುನಾದಿ ಕ್ರಿಯೆಗಳು ಮನುಷ್ಯನಂತೆ ಪಶುಗಳಲ್ಲೂ ಕಂಡು ಬರುತ್ತದೆ. ಮನುಷ್ಯನಿಗೆ ಮಾತ್ರ ಜೀವನದಲ್ಲೊಂದು ಗುರಿಯಿದೆ. ಈ ಗುರಿಯ ಅರಿವು ಮಾತ್ರ ಮನುಷ್ಯನಿಗಿರಬೇಕು.

## ಧರ್ಮ

ಜೀವನದಲ್ಲಿ ಅರ್ಥಕಾಮಗಳು ಧರ್ಮಾಧಾರಿತವಾಗಿರಬೇಕು. ಜೀವನ ತೃಪ್ತಿ ಹಾಗೂ ಆನಂದಮಯವಾಗಿರಬೇಕು. ಇವು ಭೌತಿಕ ವಸ್ತುಗಳಾದ ಧನಕನಕಗಳಿಂದ ಗಳಿಸಲು ಅಸಾಧ್ಯ. ಅವು ಮನುಷ್ಯನಲ್ಲಿ

ಪುಟ 4 ಕ್ಕೆ ➤

➢ ಪುಟ 3 ರಿಂದ.....

ಸದಾ ಅತೃಪ್ತಿ ಹಾಗೂ ಮಾನಸಿಕ ಕ್ಷೋಭೆಯನ್ನೇ ಪ್ರತಿಯಾಗಿ ನೀಡುತ್ತವೆ. ಸಂಸಾರ, ದೌಲತ್ತು, ಅಧಿಕಾರ ಹಾಗೂ ಸ್ಥಾನಮಾನಗಳು ಕೇವಲ ಕ್ಷಣಿಕ. ಮಾನವ ಕೇವಲ ಪಂಚಭೌತಿಕ ಶರೀರವಲ್ಲ. ಅವನು ಅವಿನಾಶೀ ಆತ್ಮ. ಅದು ಒಂದು ಜ್ಯೋತಿ. ಅದು ಸದಾ ಮಹಾಜ್ಯೋತಿಯೊಂದಿಗೆ ಲೀನವಾಗಲು ಚಡಪಡಿಸುತ್ತಿರುತ್ತದೆ. ಈ ಪರಮಜ್ಯೋತಿಯೊಂದಿಗೆ ಲೀನವಾಗಲು ಜ್ಞಾನ, ಭಕ್ತಿ, ನಿಷ್ಕಾಮ ಕರ್ಮ, ಚಿತ್ತವೃತ್ತಿ ನಿರೋಧ ರೂಪವಾದ ಯೋಗ– ಇವೇ ಸಾಧನಗಳು. ಇವನ್ನು ಶಿಕ್ಷಣದಿಂದ ಮಾತ್ರ ಪಡೆಯಲು ಸಾಧ್ಯ. 'ಸಾ ವಿದ್ಯಾ ಯಾ ವಿಮುಕ್ತಯೇ' ಅಜ್ಞಾನದಿಂದ ಬಿಡಿಸಿ ಮುಕ್ತಿ ಕೊಡುವುದೇ ವಿದ್ಯೆ.

ಧರ್ಮ ಎಂಬ ಪದವನ್ನು ಮತ ಎಂಬುದಾಗಿ ಅಪಾರ್ಥ ಮಾಡಿಕೊಳ್ಳಲಾಗಿದೆ. ಇಂಗ್ಲಿಷಿನಲ್ಲಿ ಅದು ರಿಲೀಜನ್ ಎಂಬುದಾಗಿ ಅರ್ಥ ಮಾಡಿಕೊಂಡಿರುವುದೇ ಇದಕ್ಕೆ ಕಾರಣ. ಆದರೆ ಧರ್ಮವೆಂಬ ಪದದ ಅರ್ಥ ಬಹಳ ವ್ಯಾಪಕವಾಗಿದೆ. ಬೇರಾವ ಪಾಶ್ಚಾತ್ಯ ಭಾಷೆಯಲ್ಲೂ ಇದಕ್ಕೆ ಸಮಾನ ಅರ್ಥವುಳ್ಳ ಪದವಿಲ್ಲ. ಮತವೆಂಬುದು ಒಂದು ಉಪಾಸನಾ ಪದ್ಧತಿ. ಆದರೆ ಧರ್ಮ ಒಂದು ಜೀವನ ಕ್ರಮ. ಈ ರೀತಿಯಾಗಿ ಈ ಪದದ ಅಪಾರ್ಥದಿಂದಾಗಿಯೇ ಧರ್ಮ/ ಕರ್ಮ ಭೂಮಿಯಾದ ಭಾರತ ಇಂದು ಧರ್ಮನಿರಪೇಕ್ಷಣಾ ನೀತಿಯನ್ನು ಅನುಸರಿಸುತ್ತಿದೆ. 'ಧಾರಣಾತ್ ಧರ್ಮ ಇತ್ಯಾಹುಃ ಧರ್ಮೋಧಾರಯತಿ ಪ್ರಜಾಃ' ಎಂದು ಧರ್ಮದ ಅರ್ಥವನ್ನು ಕೊಡಲಾಗಿದೆ. ಋಷಿ ಕಣಾದರು ಲೋಕ ಪರಲೋಕಗಳಲ್ಲಿ ಶಾಂತಿ ಹಾಗೂ ಸಮೃದ್ಧಿ ಯಾವುದರಿಂದ ಬರುವುದೋ ಅದೇ ಧರ್ಮ "ಯತಃ ಅಭ್ಯುದಯ ನಿಶ್ರೇಯಸ ಸಿದ್ಧಿಃ ಸಧರ್ಮ" ಎಂದಿದ್ದಾರೆ.

ಮನುವು ಧರ್ಮದ ಹತ್ತು ಲಕ್ಷಣಗಳನ್ನು ಈ ರೀತಿ ಹೇಳಿದ್ದಾನೆ:

**ಧೃತಿಃ ಕ್ಷಮಾ ದಮೋಸ್ತೇಯ ಶೌಚಮಿಂದ್ರಿಯ ನಿಗ್ರಹಃ।**
**ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮ ಲಕ್ಷಣಂ॥**

ಧೈರ್ಯ, ಕ್ಷಮೆ, ದಯ, ಅಸ್ತೇಯ (ಕದಿಯದಿರು) ಶೌಚ (ಬಾಹ್ಯ ಹಾಗೂ ಆಂತರಿಕ), ಇಂದ್ರಿಯ ನಿಗ್ರಹ, ವಿವೇಕ, ವಿದ್ಯಾ, ಸತ್ಯ ಹಾಗೂ ಅಕ್ರೋಧ (ಸಿಟ್ಟನ್ನು ಜಯಿಸು)– ಈ ಹತ್ತು ಗುಣಗಳನ್ನು ಧರ್ಮದ ಲಕ್ಷಣ ಎಂದಿದ್ದಾನೆ. ವ್ಯಕ್ತಿಯಲ್ಲಿ ಈ ಗುಣಗಳಿದ್ದಲ್ಲಿ ಸಮಾಜ ಜೀವನ ಶಾಂತಿಯುತವಾಗಿರುತ್ತದೆ. ಇಲ್ಲದಿದ್ದಲ್ಲಿ ಸಮಾಜದಲ್ಲಿ ಭಾರೀ ಅವ್ಯವಸ್ಥೆ ಉಂಟಾಗುತ್ತದೆ. ವ್ಯಕ್ತಿ ಯಾವ ಮತಾವಲಂಬಿಯಾಗಲೀ ತನ್ನ ಪವಿತ್ರ ಗ್ರಂಥಗಳಲ್ಲಿ ಕಂಡು ಬರುವ ತತ್ತ್ವಗಳನ್ನು ನಿಷ್ಠೆಯಿಂದ ಪಾಲಿಸಿಕೊಂಡು ಬಂದಲ್ಲಿ ಅವನನ್ನು ಧರ್ಮಾತ್ಮ ಎನ್ನುತ್ತೇವೆ. ಇತರರ ಹಾಗೂ ತನ್ನ ಹಿತರಕ್ಷಣೆಯೇ ಜೀವನದಲ್ಲಿ ಸರಿಯಾಗಿ ಬಾಳುವ ರೀತಿ.

## ದೈವಭಕ್ತಿ

ಮಾನವ ಐದು ಋಣಗಳನ್ನು ತೀರಿಸಬೇಕು. ಅವನ್ನು ಪಂಚಯಜ್ಞಗಳೆಂದು ಕರೆಯುತ್ತೇವೆ. ಅವು ಯಾವುವೆಂದರೆ ದೇವಯಜ್ಞ, ಬ್ರಹ್ಮಯಜ್ಞ, ಪಿತೃಯಜ್ಞ, ಮನುಷ್ಯ ಯಜ್ಞ ಹಾಗೂ ಪ್ರಾಣಿ ಯಜ್ಞ ದೇವರಲ್ಲಿ ಭಕ್ತಿ, ಜ್ಞಾನಾರ್ಜನೆ, ನಮ್ಮ ಪರಂಪರೆಯಲ್ಲಿ ನಂಬಿಕೆಯಿದ್ದು ಅದನ್ನು ನಮ್ಮ ಮುಂದಿನ ಜನಾಂಗಕ್ಕೆ ಅರಹುವುದು, ಪ್ರಾಣಿ ದಯೆ ಹಾಗೂ ಪರಿಸರ ಸಂರಕ್ಷಣೆ– ಇವೇ ಈ ಪಂಚಯಜ್ಞಗಳು. ಮೊದಲನೆಯದು ದೇವಯಜ್ಞ ದೇವರ ಮೇಲೆ ಭಕ್ತಿ ಮನುಷ್ಯನಾದವನಲ್ಲಿ ಇರಬೇಕು. ದೇವತೋಪಾಸನೆ ಭಾರತದಲ್ಲಿ ಜೀವನದ ಅವಿಭಾಜ್ಯ ಅಂಗ. ಭಾರತದಲ್ಲಿ ಪ್ರತಿಯೊಬ್ಬ ಹಿಂದುವಿಗೂ ದೇವರನ್ನು ತನ್ನದೇ ಆದ ರೀತಿಯಲ್ಲಿ, ತಾನು ಕಂಡ ರೀತಿಯಲ್ಲಿ ಪೂಜಿಸಲು ಅವಕಾಶವಿದೆ. ಭಾರತೀಯ ದರ್ಶನ ದೃಷ್ಟಿಯಲ್ಲಿ ಯಾವುದೇ ಉಪಾಸನಾ ಪದ್ಧತಿ ಹಾಗೂ ಪಂಥಗಳಿಗೆ ಅದರದೇ ಸ್ಥಾನವಿದೆ. ಪರಮತ ಸಹಿಷ್ಣುತೆ ಇಲ್ಲಿನ ಜನರಲ್ಲಿ ಸಹಜ ಸದ್ಗುಣವಾಗಿದೆ. ಇತರ ಮತದಲ್ಲಿ ಅವರವರ ಮತ ಗ್ರಂಥಗಳಲ್ಲಿ ತೋರಿರುವ ಮಾರ್ಗವೇ ಈಶ್ವರ ಸಾನಿಧ್ಯಕ್ಕೆ ದಾರಿ. ಬೇರೊಂದು ಮಾರ್ಗದಿಂದ ಅದನ್ನು ಪಡೆಯಲು ಸಾಧ್ಯವಿಲ್ಲ. ಈ ಕಾರಣದಿಂದಾಗಿಯೇ ಆ ಮತಾನುಯಾಯಿಗಳಲ್ಲಿ ಅನ್ಯಮತೀಯರ ಬಗ್ಗೆ ಘೋರ ರೀತಿಯಲ್ಲಿ ಅಸಹಿಷ್ಣುತೆ ತೋರಿಬರುತ್ತದೆ. ಇದಕ್ಕೆ ಇತಿಹಾಸವೇ ಸಾಕ್ಷಿ. ಭಾರತೀಯ ದರ್ಶನ ಶಾಸ್ತ್ರದ ಪ್ರಕಾರ ಸತ್ಯ ಒಂದು, ವಿದ್ವಾಂಸರು ಅನೇಕ ಹೆಸರುಗಳಿಂದ ಅದನ್ನು ವರ್ಣಿಸುತ್ತಾರೆ. ಭಾರತದ ಸಮಾಜ ಎಲ್ಲಾ ಮತಗಳ ಬಗ್ಗೆ ಕೇವಲ ಸಹಿಷ್ಣುತೆಯನ್ನು ಮಾತ್ರ ಹೊಂದಿಲ್ಲ. ಅವರ ದೃಷ್ಟಿಯಲ್ಲಿ ಎಲ್ಲಾ ಮತಗಳೂ ಸತ್ಯವೆಂದು ಗೌರವಿಸುತ್ತಾರೆ.

ಅರ್ಥಕಾಮಗಳು ಧರ್ಮಾಧಾರಿತವಾಗಿರಬೇಕು. ಆಗ ಮಾತ್ರ ಸುಖ, ಶಾಂತಿಗಳು ನಮಗೆ ಲಭ್ಯ. ಪ್ರಾಚೀನ ಭಾರತದ ಶಿಕ್ಷಣ ಪದ್ಧತಿಯಲ್ಲಿ ಧರ್ಮಕ್ಕೆ ಪ್ರಾಶಸ್ತ್ಯವಿದ್ದಿತು. ಮೆಕಾಲೇ ಶಿಕ್ಷಣ ಪದ್ಧತಿ ಜಾರಿಗೆ ಬಂದ ದಿನದಿಂದ ಶಿಕ್ಷಣದಲ್ಲಿ ಧರ್ಮದ ಪಾತ್ರ ಗೌಣವಾಯಿತು. ಕೇವಲ ಜ್ಞಾನಕ್ಕೆ ಮಾತ್ರ ಸಿಂಹ ಪಾಲು. ಇದರಿಂದ ಮಾನವ ಸಿಂಹವೇನೋ ಆಗಬಲ್ಲ. ಆದರೆ ಅವನಿಗೆ ಸಹಬಾಳ್ವೆಯ ಕಲ್ಪನೆ ಕಡಿಮೆಯಾಗಿ ಅವನಲ್ಲಿ ಪೈಶಾಚಿಕ ವೃತ್ತಿ ಜಾಸ್ತಿಯಾಗುತ್ತಿದೆ. ಸಮಾಜದಲ್ಲಿಂದು ಕೊಲೆ, ದರೋಡೆ, ಅತ್ಯಾಚಾರ, ಕ್ರೌರ್ಯ ಇವೇ ಎದ್ದು ಕಾಣುತ್ತಿವೆ. ಪಾಶ್ಚಾತ್ಯ ದೇಶಗಳದೂ ಇದೇ ದುರಂತ. ಹದಿಹರೆಯದ ಮಕ್ಕಳು ತರಗತಿಗೆ ಪೆನ್ನಿನ ಬದಲು ಪಿಸ್ತೂಲುಗಳನ್ನು ತೆಗೆದುಕೊಂಡು ಹೋಗಿ ತಮ್ಮ ಅಧ್ಯಾಪಕರನ್ನು ಹಾಗೂ ಸಹಪಾಠಿಗಳನ್ನು ಗುಂಡಿಕ್ಕಿ ಸಾಯಿಸುತ್ತಾರೆ. ಅಲ್ಲಿ ಇನ್ನು ಗಂಡು ಹೆಣ್ಣುಗಳ ಸಂಬಂಧ ಪ್ರಾಣಿಗಳಂತೆ. ಭಾರತದಲ್ಲಿ ಶಿಕ್ಷಣ ಮೌಲ್ಯಾಧಾರಿತವಾಗದಿದ್ದಲ್ಲಿ, ಈ ರೀತಿಯ ಪರಿಸ್ಥಿತಿ ಉಂಟಾಗಲು ಬಹಳ ದಿನಗಳು ಬೇಕಾಗಿಲ್ಲ. ಸಮಾಜ ಹಾಗೂ ಸರಕಾರಗಳು ಈ ವಿಚಾರದಲ್ಲಿ ಚಿಂತನೆ ಮಾಡಿ ಪ್ರಸಕ್ತ ಶಿಕ್ಷಣ ಪದ್ಧತಿಯನ್ನು ಬದಲಾಯಿಸಲು ಪ್ರಯತ್ನ ಮಾಡದಿದ್ದಲ್ಲಿ ದೇಶಕ್ಕೆ ಗಂಡಾಂತರ ಬಹಳ ದೂರವಿಲ್ಲ.

ಲೇಖನ ಮುಂದುವರೆಯುತ್ತದೆ...

- ನೀವು ಯಾವುದೇ ಕೆಲಸವನ್ನು ಮಾಡುವಾಗಲೂ ನಿಮ್ಮ ಮನಸ್ಸು ಹೃದಯ, ನಿಮ್ಮ ಸರ್ವಸ್ವವನ್ನೂ ಆ ಕೆಲಸಕ್ಕೆ ಕೊಡಿ.
- ಶಕ್ತಿಯೇ ಜೀವನ, ದುರ್ಬಲತೆಯೇ ಮರಣ; ಶಕ್ತಿಯೇ ಪರಮಾನಂದ, ಅಖಂಡಜೀವನ, ಅಮರತ್ವ. ದುರ್ಬಲತೆಯೇ ಅನವರತ ದುಃಖ, ತಳಮಳ, ದುರ್ಬಲತೆಯೇ ಮರಣ.
- ಶಿಕ್ಷಣವೆಂದರೆ ಮೊದಲೇ ಮನುಷ್ಯನಲ್ಲಿ ಇರುವ ಪರಿಪೂರ್ಣತೆಯನ್ನು ಪ್ರಕಾಶಪಡಿಸುವುದು. – ಸ್ವಾಮಿ ವಿವೇಕಾನಂದ

# ಎಸ್.ಎಸ್.ಎಲ್.ಸಿ ನಂತರದ ಅಧ್ಯಯನ ವಿಷಯಗಳು ಯಾವುದಿರಬಹುದು?



**ಲಕ್ಷ್ಮೀಸಿಂಗ್ ಬಿ.**
**ಶೈಕ್ಷಣಿಕ ಸಮಾಲೋಚಕರು, ಲೈಫ್‌ಕೋಚ್ ಸಂಪನ್ಮೂಲ ವ್ಯಕ್ತಿ (ಗಣಿತ), ಗಂಗಾನಗರ, ಬೆಂಗಳೂರು –560 032**
**ದೂರವಾಣಿ ಸಂಖ್ಯೆ: 9980033636**

ನಾನು ಲಕ್ಷ್ಮೀಸಿಂಗ್, Prof of Mathematics, resource person and Counselor ಕೂಡ ಆಗಿದ್ದೇನೆ. ಜೊತೆಗೆ ಕವನ, ಚುಟುಕ, ಲೇಖನಗಳನ್ನು ಬರೆಯುವ ಹವ್ಯಾಸವೂ ಇದೆ.

ಈ ಲೇಖನದ ಮುಖ್ಯ ಉದ್ದೇಶ ಎಸ್.ಎಸ್.ಎಲ್.ಸಿ ಅಥವಾ 10ನೇ ತರಗತಿಯ ನಂತರ ವಿದ್ಯಾರ್ಥಿಗಳಲ್ಲಿ ಮೂಡುವ ಗೊಂದಲಗಳನ್ನು, ಸ್ವಲ್ಪ ಮಟ್ಟಿಗೆ ಕಡಿಮೆ ಮಾಡುವುದು. ಅಂದರೆ ಘುಚಿಣ ಟಿಜಥಣ ಚಿಜಿಣಜಡಿ ಖ ಖ ಐ ಅ? ಇದಕ್ಕೆ ಉತ್ತರಿಸುವ ಪ್ರಯತ್ನ.

ಸ್ನೇಹಿತರೆ, ಎಸ್.ಎಸ್.ಎಲ್.ಸಿ ಪರೀಕ್ಷೆ ಮುಗಿದಿದೆ, ಫಲಿತಾಂಶ ಕೂಡ ಬಂದಿದೆ, ಒಳ್ಳೆಯ ಅಂಕಗಳಿಂದ ನೀವೆಲ್ಲಾ ತೇರ್ಗಡೆ ಕೂಡ ಹೊಂದಿದ್ದೀರಾ ಎಂದು ಭಾವಿಸುತ್ತೇನೆ, ಇದು ಸಂತೋಷದ ವಿಷಯ.

ಮೊದಲನೇ ತರಗತಿಯಿಂದ 10ನೇ ತರಗತಿಯವರೆಗೂ ಎಲ್ಲಾ ಬೋರ್ಡ್ ಸಿಲಬಸ್‌ನ ಮಕ್ಕಳೂ (ಅಂದರೆ ICSE, CBSE & State) ಏಕರೂಪವಾಗಿ ಎಲ್ಲಾ ವಿಷಯಗಳನ್ನು ಓದಿಕೊಂಡು ಬಂದಿರುತ್ತಾರೆ. ಅಲ್ಪ ಸ್ವಲ್ಪ ವ್ಯತ್ಯಾಸವಿರುತ್ತದೆ ಅಷ್ಟೆ. ಆದರೆ 10ನೇ ತರಗತಿಯ ನಂತರ ಇವೇ ವಿಷಯಗಳೂ ಇನ್ನೂ ಸ್ವಲ್ಪ ಆಳವಾಗಿ ವಿಷಯಗಳನ್ನು ಒಳಗೊಂಡು ಬೇರೆ ಬೇರೆ ಸ್ಟ್ರೀಮ್‌ಗಳಾಗಿ ಪರಿವರ್ತನೆಗೊಳ್ಳುತ್ತವೆ. ಪಿಯುಸಿಗೆ ಸೇರಬೇಕಾದಾಗ ಈ ಸ್ಟ್ರೀಮ್‌ಗಳ ಆಯ್ಕೆಯಲ್ಲಿ ಸಹಜವಾಗಿ ವಿದ್ಯಾರ್ಥಿಗಳಲ್ಲಿ ಗೊಂದಲ ಮೂಡುತ್ತದೆ. ಯಾವ ಯಾವ ವಿಷಯಗಳನ್ನು ಆಯ್ಕೆ ಮಾಡಿದರೆ ಮುಂದಿನ ಭವಿಷ್ಯ ಸುಗಮವಾಗಿರುತ್ತದೆ ಎಂಬ ಚಿಂತೆ ಮೂಡುತ್ತದೆ. ಇದರ ಜೊತೆಗೆ ಮುಖ್ಯವಾಗಿ ಯಾವ ಕಾಲೇಜಿಗೆ ಸೇರಬೇಕು ಎಂಬುದರ ಬಗ್ಗೆಯೂ ಆತಂಕ ಶುರುವಾಗುತ್ತದೆ. ಈ ಎಲ್ಲ ಗೊಂದಲ, ಆತಂಕಗಳಿಗೆ ಪರಿಹಾರವನ್ನು ಕೊಡುವ ನಿಟ್ಟಿನಲ್ಲಿ ನಾನು ಈ ಬರಹದ ಮೂಲಕ ಪ್ರಯತ್ನಿಸುತ್ತಿದ್ದೇನೆ.

ಬಹುವಾಗಿ 10ನೇ ತರಗತಿಯ ನಂತರ ಪಿಯುಸಿಗೆ ಅಡ್ಮೀಷನ್ ಮಾಡುವಾಗ ಅಂಕಗಳ ಆಧಾರದ ಮೇಲೆ ಸ್ಟ್ರೀಮ್‌ಗಳ ಆಯ್ಕೆಯನ್ನು ಮಾಡಲು ಯೋಚಿಸುತ್ತಾರೆ. ಅಂದರೆ ಗಣಿತ ಮತ್ತು ವಿಜ್ಞಾನಗಳಲ್ಲಿ ಒಳ್ಳೆಯ ಅಂಕ ಬಂದರೆ, ಸೈನ್ಸ್ ಸ್ಟ್ರೀಮ್ ತೆಗೆದುಕೊಳ್ಳುವುದು ಇಲ್ಲದಿದ್ದರೆ ಕಾಮರ್ಸ್ ಅಥವಾ ಆರ್ಟ್ಸ್‌ಗೆ ಸೇರುವುದು ಎಂಬ ನಿರ್ಧಾರ ಮಾಡಿರುತ್ತಾರೆ. ಈ ರೀತಿಯ ನಿರ್ಧಾರ ತೆಗೆದುಕೊಳ್ಳುವುದು ಖಂಡಿತಾ ತಪ್ಪು ಎಂಬುದು ನನ್ನ ಅಭಿಪ್ರಾಯ.

ನನ್ನದೇ ಉದಾಹರಣೆಯಿಂದ ನಿಮಗೆ ಅರ್ಥಮಾಡಿಸುತ್ತೇನೆ. ಚಿಕ್ಕಂದಿನಿಂದಲೂ ನನಗೆ ಗಣಿತದಲ್ಲಿ ಆಸಕ್ತಿ ಹೆಚ್ಚು. ಇದು ನನ್ನ ತಂದೆಯ ಪ್ರಭಾವ ಎಂದರೆ ತಪ್ಪಾಗಲಾರದು. ಆದರೆ 10ನೇ ತರಗತಿಯಲ್ಲಿ ನನಗೆ ಗಣಿತಕ್ಕಿಂತ, ಸಮಾಜವಿಜ್ಞಾನ ಮತ್ತು ಕನ್ನಡದಲ್ಲಿ ಒಳ್ಳೆಯ ಅಂಕಗಳು ಬಂದಿದ್ದವು. ಪಿಯುಸಿಗೆ ಪ್ರವೇಶ ಪಡೆಯುವಾಗ ನಾನೂ ಕೂಡ ಗೊಂದಲಕ್ಕೆ ಒಳಗಾದೆ, ಬೇರೆಯವರ ಸಲಹೆ ಸೂಚನೆಗಳ ಮೇರೆಗೆ, ಆರ್ಟ್ಸ್ ತೆಗೆದುಕೊಂಡೆ. ಸಮಾಜ ವಿಷಯದಲ್ಲಿ ಎಂ.ಎ ಬಿಎಡ್ ಮಾಡಿ ಉಪನ್ಯಾಸಕಳಾಗುವುದು ಎಂಬುದು ಅವರುಗಳ ಸಲಹೆಯಾಗಿತ್ತು. ಆದರೆ ಕ್ಲಾಸ್ ಶುರುವಾದಾಗ 10ರಿಂದ 15 ದಿನಗಳಲ್ಲಿಯೇ ನನಗೆ ಆಸಕ್ತಿ ಕುಗ್ಗಿದಂತಾಯಿತು. ಯಾಕೆಂದರೆ ನನ್ನ ಆಸಕ್ತಿ ಗಣಿತದಲ್ಲಿ ಮತ್ತು ಜೀವಶಾಸ್ತ್ರದಲ್ಲಿ ಇತ್ತು. ತಕ್ಷಣವೇ ನಾನು ನಮ್ಮ ಪ್ರಾಂಶುಪಾಲರ ಹತ್ತಿರ ಹೋಗಿ ಕೇಳಿಕೊಂಡೆ. ಸೈನ್ಸ್ ಸ್ಟ್ರೀಮ್‌ಗೆ ಬದಲಾಯಿಸಿಕೊಂಡೆ. ಅದರ ಪರಿಣಾಮವೇ ಇಂದು ನಾನು ಹೆಮ್ಮೆಯಿಂದ ಗಣಿತ ಉಪನ್ಯಾಸಕಿ ಎಂದು ಹೇಳುವುದು.

ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಅಂಕಗಳನ್ನು ನೋಡಿ ನಿಮ್ಮನ್ನು ನೀವು ನಿರ್ಧರಿಸದಿರಿ. ಆಯ್ಕೆಗಳನ್ನಂತೂ ಖಂಡಿತಾ ಮಾಡಬೇಡಿ. ಬೇರೆಯವರ ಸಲಹೆ ಸೂಚನೆಗಳನ್ನು ಖಂಡಿತಾ ಕೇಳಿ. ಆದರೆ ನಿಮ್ಮ ಆಸಕ್ತಿಯ ವಿಷಯವನ್ನೇ ಆರಿಸಿಕೊಳ್ಳಿ. ಬಲವಂತದಿಂದ ಓದಿದರೆ ಖಂಡಿತಾ ಅದು ನಿಮ್ಮ ಭವಿಷ್ಯಕ್ಕೆ ಮಾರಕ. ಸರಿಯಾದ ಮಾರ್ಗದರ್ಶನ ಬಹಳ ಮುಖ್ಯ. ಯಾರಾರೋ ನಿಮ್ಮ ಸ್ನೇಹಿತರು ಆಯ್ಕೆ ಮಾಡಿಕೊಂಡರೆಂದೋ ಅಥವಾ ಪ್ರತಿಷ್ಠೆಗೋಸ್ಕರನೋ ಖಂಡಿತಾ ಓದಬೇಡಿ. ಯಾವ ಕೋರ್ಸ್‌ಗಳನ್ನು ಮಾಡಿದರೆ ಮುಂದಿನ ನಿಮ್ಮ ಭವಿಷ್ಯ ಸುಗಮವಾಗಿರುತ್ತದೆ ಎಂಬುದನ್ನು ಅರಿಯಿರಿ. ಸರಿಯಾದ ಮಾರ್ಗದರ್ಶನ ಪಡೆಯಿರಿ. ಹಿಂಜರಿಯಬೇಡಿ. ಭವಿಷ್ಯವಿಲ್ಲದ ಕೋರ್ಸ್‌ಗಳನ್ನು ಮಾಡಿದರೆ ಖಂಡಿತಾ ನಿಮ್ಮ ಸಮಯ ಮತ್ತು ಹಣ ವ್ಯರ್ಥ. ಆದ್ದರಿಂದ ಪಿಯುಸಿಗೆ ಸೇರಬೇಕಾದಾಗ ನಿಮ್ಮ ಆಸಕ್ತಿಕರವಾದ ಮತ್ತು ಭವಿಷ್ಯಕ್ಕೆ ಅನುಕೂಲವಾಗುವ ಕೋರ್ಸ್‌ಗಳನ್ನು ಆರಿಸಿಕೊಳ್ಳಿ.

10ನೇ ತರಗತಿಯ ನಂತರ ಬೇಸಿಕ್ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುವುದು ಉತ್ತಮ. ಇವುಗಳಿಗೆ ಯಾವಾಗಲೂ ಬೆಲೆ ಇರುತ್ತದೆ. ಸೈನ್ಸ್, ಕಾಮರ್ಸ್, ಆರ್ಟ್ಸ್, ಡಿಪ್ಲೋಮಾ, ಪಾಲಿಟೆಕ್ನಿಕ್, ಐ.ಟಿ.ಐ ಮತ್ತು ಪಾರಾ ಮೆಡಿಕಲ್ಸ್ ಮುಖ್ಯವಾದ ಬೇಸಿಕ್ ಕೋರ್ಸ್‌ಗಳಾಗಿರುತ್ತದೆ. ಇವುಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವುದು ಉತ್ತಮ ಎಂಬುದು ನನ್ನ ಅಭಿಪ್ರಾಯ. ಅದು ನಿಮ್ಮ ಆಸಕ್ತಿಯ ವಿಷಯವೂ ಆಗಿರಬೇಕು ಎಂಬುದು ಬಹಳ ಮುಖ್ಯ. ಪಿಯುಸಿ ನಂತರ ನಿಮಗೆ ನಿಮ್ಮ ಗುರಿಯ ಸ್ಪಷ್ಟನೆ ಸಿಗುತ್ತದೆ ಎಂದು ನಾನು ಭಾವಿಸುತ್ತೇನೆ.

ಇನ್ನೊಂದು ಮುಖ್ಯ ಗೊಂದಲ ಏನೆಂದರೆ ಯಾವ ಕಾಲೇಜಿಗೆ ಸೇರುವುದು ಎಂಬುದು. ಇಲ್ಲಿಯೂ ಕೂಡ ಸರಿಯಾದ ಮಾರ್ಗದರ್ಶನ ಬಹಳ ಮುಖ್ಯ. ನನ್ನ ಅಭಿಪ್ರಾಯದಲ್ಲಿ ನಮಗೆ ಹತ್ತಿರವಿರುವ ಕಾಲೇಜಿಗೆ ಸೇರಿದರೆ ಬಹಳ ಅನುಕೂಲ. ತಂದೆ ತಾಯಿಯರೂ ಕೂಡ ಕಳವಳದಿಂದ ಇರುವುದು ತಪ್ಪುತ್ತದೆ. ನಿಮ್ಮ ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಕಾಲೇಜನ್ನು ನಿರ್ಧಾರ ಮಾಡುವುದು ಉತ್ತಮ.

ಪುಟ 10 ಕ್ಕೆ ➤

ಬಹುರತ್ನಾ ವಸುಂಧರಾ

# ಸರಸ್ವತಿಬಾಯಿರಾಜವಾಡೆ

ಡಾ॥ ಶ್ರೀವಳ್ಳಿ
ಬೆಂಗಳೂರು

ಸರಸ್ವತಿಬಾಯಿರಾಜವಾಡೆ ಎಂಬ ಲೇಖಕಿ 1940–50 ರ ದಶಕದಲ್ಲಿ 'ಗಿರಿಬಾಲೆ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿದ್ದು, ತಮ್ಮ ದಿಟ್ಟಬರಹಗಳಿಂದ 'ಉತ್ತಮಲೇಖಕಿ' ಎಂದು ಹೆಸರಾಗಿದ್ದರು. 'ಗಿರಿಬಾಲ' ಎಂಬ ಹೆಸರು ಅಲ್ಲದೆ 'ವಿಶಾಖ', 'ವೀಣಾಪಾಣಿ', 'ಸರಸ್ವತಿಬಾಯಿ' ಮೊದಲಾದ ಹೆಸರುಗಳಿಂದಲೂ ಅವರು ಬರೆಯುತ್ತಿದ್ದರು. ಒಂದೇ ಹೆಸರಿನಿಂದ ಬರೆದದ್ದನ್ನು ಓದುಗರು ಮೆಚ್ಚುತ್ತಾರೆಯೋ ಅಥವಾ ನಿಜವಾಗಲೂ ತಮ್ಮ ಬರವಣಿಗೆಯಲ್ಲಿ ಸತ್ವವಿದೆಯೋ ಎಂಬುದನ್ನು ಪರೀಕ್ಷಿಸಿಕೊಳ್ಳಲೆಂದೇ ಹೀಗೆ ಬೇರೆ ಬೇರೆ ಹೆಸರುಗಳಿಂದ ಬರೆಯುತ್ತೇನೆಂದು ಅವರೇ ಹೇಳಿಕೊಳ್ಳುತ್ತಿದ್ದರೆಂದು ಅವರನ್ನು ಸಮೀಪದಿಂದ ಬಲ್ಲ ಡಾ॥ ಶ್ರೀವಳ್ಳಿ ಎಂಬವರು ಹೇಳುತ್ತಾರೆ. ಹೀಗೆ ತಮ್ಮನ್ನು ತಾವು ವಿಮರ್ಶಿಸಿಕೊಂಡು ಬೆಳೆದ, ಚಿಕಿತ್ಸಕ ಬುದ್ಧಿಯ ಸಾಹಿತಿ ಗಿರಿಬಾಲೆ. ಅವರದು ವೈವಿಧ್ಯ ಪೂರ್ಣವ್ಯಕ್ತಿತ್ವದವರು. ಸಾಹಿತ್ಯದ ಎಲ್ಲ ಕ್ಷೇತ್ರಗಳಲ್ಲಿಯೂ ಬರೆದಿದ್ದಾರೆ. ಅಲ್ಲದೆ ಬಾಲ್ಯದಲ್ಲಿ ಅವರು ನಾಟಕಗಳಲ್ಲಿಯೂ ಅಭಿನಯಿಸುತ್ತಿದ್ದರು. ಯಾವುದೇ ಕೆಲಸವನ್ನು ಛಲದಿಂದ ಸಾಧಿಸುವ ಮತ್ತು ಆ ಕಾರ್ಯವನ್ನು ಅಚ್ಚುಕಟ್ಟಾಗಿ ಮಾಡುವ ಸ್ವಭಾವ ಅವರದಾಗಿತ್ತು. ಅವರ ಸಾಹಿತ್ಯ ರಾಶಿ ವಿಪುಲವಾದುದು. 72 ಸಣ್ಣ ಕಥೆಗಳು, 54 ಪ್ರಬಂಧಗಳು, 7 ನಾಟಕಗಳು, 25 ಕವನಗಳು, 100ಕ್ಕೂ ಮಿಕ್ಕ ದೇವರನಾಮಗಳು, 2 ಕಾದಂಬರಿಗಳು (ಒಂದು ಅನುವಾದಿತ) ಹಲವು ಆರೋಗ್ಯ ಲೇಖನಗಳು ಅದರಲ್ಲಿ ಸೇರಿವೆ. ಅಲ್ಲದೆ ಅವರು ಪತ್ರಿಕೋದ್ಯಮಿ ಯಾಗಿಯೂ ದುಡಿದಿದ್ದಾರೆ. ಅದರ ಮೂಲಕ ಮಹಿಳೆಯರ ಸರ್ವತೋಮುಖ ಏಳಿಗೆಗಾಗಿ ಶ್ರಮಿಸಿದ ಬಹುಮುಖ ಪ್ರತಿಭಾವಂತೆ 'ಗಿರಿಬಾಲೆ'.

ಗಿರಿಬಾಲೆಯವರ ಬದುಕು ಬಹುಸಂಕೀರ್ಣವಾದುದು. ಅವರ ತಾಯಿ ತಾನು ಗರ್ಭಿಣಿಯಾಗಿದ್ದೇನೆಂದು ತಿಳಿಸಿದಕೂಡಲೇ ಹರಿದಾಸರಾಗಿದ್ದ ತಂದೆ ಗರ್ಭವನ್ನು ತೆಗೆಸುವಂತೆ ಒತ್ತಾಯಿಸಿದರಂತೆ. ತಾಯಿ ಒಪ್ಪದಿದ್ದಾಗ ಆ ತಂದೆ ಎನಿಸಿಕೊಂಡ ವ್ಯಕ್ತಿ ಸಂಸಾರವನ್ನೇ ತೊರೆದು ಹೋಗಿಬಿಟ್ಟರಂತೆ. ಹೀಗೆ ಅವರ ಹುಟ್ಟಿನ ಮೂಲದಲ್ಲೇ ಸಂಘರ್ಷವನ್ನು ಕಾಣುತ್ತೇವೆ. ಬಡತನದ ಬವಣೆಯಿಂದ ಬೇಸತ್ತಿದ್ದ ತಾಯಿ 'ತಂದೆಯನ್ನು ತಿಂದಮಾರಿ' ಎಂದು ಬೈಯುತ್ತಿದ್ದರಂತೆ. ಬಯಸಿ ಬಯಸಿ ಪಡೆದ ಮಗು ಅವರಿಗೆ ಭಾರವಾಗಿತ್ತು. ಒಂದು ಹೊತ್ತಿನ ಗಂಜಿಗೂ ಕಷ್ಟವಾಗಿದ್ದ ದಿನಗಳಲ್ಲಿ ಹುಡುಗಿಗೆ ಶಾಲೆಗೆ ಸೇರಬೇಕೆಂಬ ಆಸೆ ಮಾತ್ರ ಅಪಾರವಾಗಿತ್ತು. ತಾಯಿ ಅವರಿವರಲ್ಲಿ ಬೇಡಿಸ್ಲೇಟು, ಬಳಪ ತಂದು ಶಾಲೆಗೆ ಸೇರಿಸಿದ್ದರು. ಮುಂದೆ ಜೀವನ ನಿರ್ವಹಣೆಗಾಗಿ ಗಿರಿಬಾಲೆ 'ಬೇಬಿ ಸರೋಜ' ಎಂಬ ಹೆಸರಿನಲ್ಲಿ ಸಿನಿಮಾದಲ್ಲಿ ನಟಿಸಿದ್ದರು. 'ಅಂಬಾಪ್ರಸಾದಿತ' ಎಂಬ ನಾಟಕ ಕಂಪೆನಿಯಲ್ಲಿ ಬಾಲನಟಿಯಾಗಿ ಅಭಿನಯಿಸಿದ್ದರು. ಆ ಎಲ್ಲ ಅನುಭವಗಳು ಅವರಿಗೆ ಜೀವನದ ನಾನಾ ಮುಖಗಳನ್ನು ತೋರಿಸಿತ್ತು. ಸಮಸ್ಯೆಗಳನ್ನು ಸೂಕ್ಷ್ಮವಾಗಿ ಅವಲೋಕಿಸುವ ವಿಮರ್ಶಕ ಮನಸ್ಸನ್ನು ಅದು ನೀಡಿತ್ತು.

ಹದಿನೈದನೇ ವಯಸ್ಸಿನಲ್ಲಿ ಮದುವೆಯಾದ ಗಿರಿಬಾಲೆ ಪತಿಗೆ



ಎರಡನೇ ಹೆಂಡತಿಯಾಗಿದ್ದರು. ತಂದೆಯಿಲ್ಲದ ಹುಡುಗಿಯನ್ನು ಸೋದರಮಾವ 51 ರ ವ್ಯಕ್ತಿಗೆ ಮದುವೆ ಮಾಡಿಕೊಟ್ಟಿದ್ದರು. 'ಮಗಳ ವಯಸ್ಸಿನ ಹುಡುಗಿಯನ್ನು ಏಕೆ ಮದುವೆಯಾದಿರಿ' ಎಂದು ಗಿರಿಬಾಲೆಯೇ ಕೇಳಿದಾಗ ಅವರು ಹೇಳಿದ್ದ ಮಾತು ಮರೆಯುವಂತಿರಲಿಲ್ಲ. 'ನಾನು ಲೌಕಿಕ ಸುಖಕ್ಕಾಗಿ ಮದುವೆಯಾಗಲಿಲ್ಲ, ಈಅಮ್ಮನಸೇವೆಗಾಗಿ' ಎಂದು ಶಾರದಾಂಬೆಯ ಮುಂದೆ ನಿಲ್ಲಿಸಿ ಹೇಳಿದ್ದರು. ಸಿಂಗಪುರದಲ್ಲಿ ಶ್ರೀಮಂತ ಪತಿರಾಯಶಾಸ್ತ್ರ ರಾಜವಾಡೆಯವರ ಮನೆ ಸೇರಿದ ಗಿರಿಬಾಲೆ ಚಿನ್ನದ ಪಂಜರದ ಗಿಣಿಯಾಗಿದ್ದರು. ಗೃಹಬಂಧನದಲ್ಲಿಯೇ ಮೂರುವರ್ಷಗಳನ್ನು ಕಳೆದ ನಂತರ ಪತಿಯ ಗೆಳೆಯರ ಮಗಳು ಗೆಳತಿಯಾಗಿ ದೊರೆತು ಆಕೆಯೊಂದಿಗೆ ಅಂದಿನ ಎಲ್ಲಪ್ರಸಿದ್ಧ ಪತ್ರಿಕೆಗಳನ್ನು ಓದುವ ಅವಕಾಶ ದೊರಕಿತ್ತು. ಹಾಗೆಯೇ ಪುಸ್ತಕಗಳೇ ಅವರಿಗೆ ಗೆಳತಿಯರಾಗಿದ್ದರು. ಓದುತ್ತ ಓದುತ್ತ ಅವರಿಗೆ ತಾವೂ ಬರೆಯಬೇಕೆನ್ನಿಸಿ ಬರೆಯಲು ಆರಂಭಿಸಿದ್ದರು. ಅವರ 16 ನೇ ವಯಸ್ಸಿನಲ್ಲಿ 'ನನ್ನ ಅಜ್ಞಾನ' ಮೊದಲಿಗೆ ಅಚ್ಚಾಗಿತ್ತು. ಅಂದಿನಿಂದ ನಾಲ್ಕು ದಶಕಗಳ ಕಾಲ ಅವರ ಬರವಣಿಗೆ ಅವ್ಯಾಹತವಾಗಿ ನಡೆಯಿತು.

ಗಿರಿಬಾಲೆ ಸ್ತ್ರೀ ನೆಲೆಯಿಂದ ಬದುಕನ್ನು ನೋಡುವ ಹೊಸ ದೃಷ್ಟಿಯನ್ನು ಸಾಹಿತ್ಯ ಕ್ಷೇತ್ರದಲ್ಲಿ ತಂದರು. ಪುರುಷ ಮಹಿಳೆಗಾಗಿ ರೂಪಿಸಿದ ನಿಯಮಗಳಿಂದ ಸಹಿಸುತ್ತಿದ್ದ ನೋವಿನ ದನಿ ಸಾಹಿತ್ಯದ ಮೂಲಕ ಜನತೆಯನ್ನು ತಲುಪಿತ್ತು. ಸಣ್ಣ ಕಥೆಗಳ ಮಾಧ್ಯಮವನ್ನು ಆರಿಸಿಕೊಂಡ ಗಿರಿ ಬಾಲೆಯ ವರ ಮೊದಲ ಕಥಾಸಂಕಲನ ಆಹುತಿ ಇತ್ಯಾದಿ ಕಥೆಗಳು 1938 ರಲ್ಲಿ ಪ್ರಕಟವಾಯಿತು. ಅಂದಿನ ಪತ್ರಿಕೆಗಳಲ್ಲಿ ಬೆಳಕುಕಂಡ ಈ ಕಥೆಗಳು ನಂತರದಲ್ಲಿ ಪುಸ್ತಕ ರೂಪವನ್ನು ಕಂಡಿದ್ದವು. ಸ್ತ್ರೀ ಶೋಷಣೆಯ ವಿವಿಧ ಮುಖಗಳನ್ನು ವಸ್ತುವಾಗಿ ಉಳ್ಳ ಈ ಕಥೆಗಳು ವಿಧವಾ ಸಮಸ್ಯೆ, ವೇಶ್ಯಾ ಸಮಸ್ಯೆ ಮತ್ತು ವರದಕ್ಷಿಣೆ ಸಮಸ್ಯೆಗಳನ್ನು ಒಳಗೊಂಡಿರುತ್ತಿದ್ದುವು. ಸ್ತ್ರೀ ಪರ ದೃಷ್ಟಿ ಇವರ ಹೆಚ್ಚಿನ ಕಥೆಗಳಲ್ಲಿ ಕಂಡು ಬಂದರೂ ಮನುಷ್ಯನ ಸ್ವಭಾವದ ವಿವಿಧ ಮುಖಗಳು, ಸಾಮಾಜಿಕ ಸಮಸ್ಯೆಗಳೂ ಸಹ ಇವರ ಕಥೆಗಳ ವಸ್ತುಗಳಾಗಿವೆ. ಇವುಗಳಲ್ಲಿ ಬಡತನ, ಜೀತಪದ್ಧತಿ, ಜಾತಿವ್ಯವಸ್ಥೆ ಸೇರುತ್ತವೆ. ಕನ್ನಡದ ಮೊದಲ ಹಂತದ ಕತೆಗಾರ್ತಿಯರಲ್ಲಿ 'ಗಿರಿಬಾಲೆ' ಕಾವ್ಯನಾಮದ ಸರಸ್ವತೀಬಾಯಿ ರಾಜವಾಡೆಯವರು ಪ್ರಧಾನವಾಗಿ ಸಲ್ಲುತ್ತಾರೆ. ●



# ಬೇಸಿಗೆ ರಜೆಯ ಸದುಪಯೋಗ... ಹೇಗೆ?




**ಡಾ|| ಲೋಕೇಶ್**
**ಮುಖ್ಯಸ್ಥರು & ಸಂಯೋಜನಾಧಿಕಾರಿಗಳು**
**'ಶಿಕ್ಷಣ ವಿಭಾಗ', NMKRV ಮಹಿಳಾ ಕಾಲೇಜು, ಜಯನಗರ 3ನೇ ಬ್ಲಾಕ್, ಬೆಂಗಳೂರು**


ಪೋಷಕರಿಗೆ ಮಕ್ಕಳನ್ನು ದಿನನಿತ್ಯ ಶಾಲೆಗೆ ತಪ್ಪದೇ ಕಳಿಸುವಲ್ಲಿ ಇರುವ ಕಾಳಜಿ, ಮಕ್ಕಳಿಗೆ ರಜೆ ಬಂದಾಗ ಅವರನ್ನು ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸುವುದು ಸಹ ಬಹು ದೊಡ್ಡ ಸವಾಲೇ ಆಗಿದೆ. ಬೇಸಿಗೆ ರಜೆಯ ಸಂದರ್ಭದಲ್ಲಿ ಮಕ್ಕಳನ್ನು ಮಾನಸಿಕವಾಗಿ ಮತ್ತು ದೈಹಿಕವಾಗಿ ಸಮತೋಲನ ಕಾಯ್ದುಕೊಳ್ಳುವಂತೆ ಪೋಷಕರು ಸಹಕರಿಸಬೇಕು. ಪೋಷಕರು ತಮ್ಮ ವೃತ್ತಿ ಬದುಕಿನ ಸಂಘರ್ಷದಿಂದ ಹೊರಬಂದು ತಮ್ಮ ಮಕ್ಕಳ ಸ್ವಾಸ್ಥ್ಯಕ್ಕೆ ಸಮಯವನ್ನು ಮೀಸಲಿಡುವುದು ಅತ್ಯಗತ್ಯವಾದದ್ದು. ವರ್ಷವಿಡೀ ಮಕ್ಕಳು ಕಲಿಕೆಯಲ್ಲಿ ತೊಡಗಿಕೊಂಡು ಕೇವಲ ಶಾಲೆಯ ನಾಲ್ಕು ಗೋಡೆಗಳ ಮಧ್ಯೆ ಹೆಚ್ಚಿನ ಸಮಯ ಕಳೆದಿರುತ್ತಾರೆ. ಆದ ಕಾರಣ ಅವರಲ್ಲಿ ಚೈತನ್ಯ ಪೂರ್ಣತೆಯನ್ನು ಮತ್ತೆ ತರುವಲ್ಲಿ ಬೇಸಿಗೆಯ ರಜೆ ಅತ್ಯುತ್ತಮ ಅವಧಿ ಎನಿಸಿದೆ. ಮಕ್ಕಳನ್ನು ಬೇಸಿಗೆಯ ಶಿಬಿರದಲ್ಲಿ ಪಾಲ್ಗೊಳ್ಳುವಂತೆ ಮಾಡಿ ದೈಹಿಕ ಮತ್ತು ಮಾನಸಿಕ ಸದೃಢತೆಯ ಚೈತನ್ಯಕ್ಕೆ ಅಗತ್ಯವಾದ ಚಟುವಟಿಕೆಯಲ್ಲಿ ತೊಡಗಿಸುವುದರ ಮೂಲಕ ಪರಿಪೂರ್ಣ ವ್ಯಕ್ತಿತ್ವ ವಿಕಸನಕ್ಕೆ ಪೋಷಕರು ಸಹಕರಿಸಬೇಕಾಗುತ್ತದೆ.

'ಸದೃಢ ದೇಹದಲ್ಲಿ ಸದೃಢ ಮನಸ್ಸಿನ ಸಾಕಾರಕ್ಕೆ ಬೇಸಿಗೆ ರಜೆಯನ್ನು ಸದುಪಯೋಗಪಡಿಸಿಕೊಳ್ಳಬೇಕು. ಮಕ್ಕಳಿಗೆ ಆಸಕ್ತಿ ಇರುವ ಹವ್ಯಾಸಗಳಲ್ಲಿ ಹೆಚ್ಚು ತೊಡಗಿಕೊಳ್ಳುವಂತೆ ಪ್ರೇರೇಪಿಸಬೇಕಾಗುತ್ತದೆ. ಉದಾಹರಣೆಗೆ ಈಜು ಕಲಿಯುವುದು, ಚಿತ್ರಕಲೆ, ಯೋಗ, ಕರಾಟೆ, ತೋಟಗಾರಿಕೆ, ಕಥೆ, ಕವನ ಮತ್ತು ಕಾದಂಬರಿಗಳನ್ನು ಓದುವುದು ಇತ್ಯಾದಿ. ಯಾವುದಾದರೂ ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸ ಕರೆದುಕೊಂಡು ಹೋಗಿ ಮಕ್ಕಳಿಗೆ ಸ್ಥಾನಿಕ ಇತಿಹಾಸದ ಬಗ್ಗೆ ಗೌರವ ಆದರಗಳನ್ನು ಬೆಳೆಸುವುದು ಅತ್ಯವಶ್ಯಕವಾಗಿದೆ. ಪರಿಸರತ್ಮಾಕ ಚಟುವಟಿಕೆಗಳಲ್ಲಿ ಹೆಚ್ಚು ಸಕ್ರಿಯರನ್ನಾಗಿ ಮಾಡಬೇಕಾಗುತ್ತದೆ. ಗಿಡಗಳ ಪೋಷಣೆಯಲ್ಲಿ ತೊಡಗಿಸಬೇಕು ಆ ಮೂಲಕ ಮಕ್ಕಳು ಪರಿಸರದ ಬಗ್ಗೆ ಧನಾತ್ಮಕ ಮನೋಭಾವ ಹೊಂದುವಂತೆ ಮಾಡಬಹುದು. ಪರಿಸರ ಬಿಟ್ಟು ಮಾನವನ ಜೀವನ ಅಸ್ಥಿತ್ವದಲ್ಲಿ ಇಲ್ಲ ಎಂಬ ಸತ್ಯವನ್ನು ಮನವರಿಕೆ ಮಾಡಿಕೊಡಬೇಕು. ಬೀಜದುಂಡೆ (ಜಜಜ ಛಚಿಟಟ) ಗಳನ್ನು ತಯಾರಿಸುವ ಮತ್ತು ಮಾನ್‌ಸೂನ್‌ನ ಪ್ರಾರಂಭದಲ್ಲಿ ಅವುಗಳನ್ನು ಬಂಜರು ಭೂಮಿಯಲ್ಲಿ ಎಸೆದು ಮುಂದಿನ ದಿನಗಳಲ್ಲಿ ಸಾಕಷ್ಟು ಮರಗಿಡಗಳಿಂದ ಆ ಪ್ರದೇಶ ಕಂಗೊಳಿಸುವಂತೆ ಮಾಡುವುದನ್ನು ಮಕ್ಕಳಲ್ಲಿ ಹವ್ಯಾಸವಾಗಿ ಬೆಳಸಬೇಕು.

ಬೇಸಿಗೆ ರಜೆಯಲ್ಲಿ ಮಕ್ಕಳಿಗೆ ಪುಸ್ತಕ ಪ್ರಪಂಚವನ್ನು ಪರಿಚಯಿಸ ಬೇಕು. ಕನ್ನಡ ಸಾಹಿತ್ಯದಲ್ಲಿರುವ ಅಪಾರ ಜ್ಞಾನಭಂಡಾರವನ್ನು ಓದಿ, ಅರಗಿಸಿಕೊಂಡು ಅದನ್ನು ಪ್ರಶಂಸಿಸುವ ಮನೋಭೂಮಿಕೆಯನ್ನು ಮಕ್ಕಳ ವ್ಯಕ್ತಿತ್ವದಲ್ಲಿ ಬೆಳಸಬೇಕು. ಸಾಹಿತ್ಯದ ಅಧ್ಯಯನದಿಂದ ವ್ಯಕ್ತಿತ್ವ ಅರಳಿ ಕವಿಯ ಮನಸ್ಸು, ಲೇಖಕರ ಆಶಯದ ಮನಸ್ಥಿತಿಯನ್ನು ಮಕ್ಕಳಲ್ಲಿ ಉಂಟುಮಾಡಬೇಕು. 'ದೇಶ ಸುತ್ತು ಕೋಶ ಓದು' ಎಂಬುದನ್ನು ಮಕ್ಕಳ ವ್ಯಕ್ತಿತ್ವದಲ್ಲಿ ಗಟ್ಟಿಯಾಗಿ ನೆಲೆಗೊಳಿಸಬೇಕು. ದೇಶದ ಸನಾತನ ಇತಿಹಾಸ, ಪರಂಪರೆಗಳ ಬಗ್ಗೆ ಆಸಕ್ತಿ ಮೂಡಿಸಿ ಮಕ್ಕಳನ್ನು ರಾಷ್ಟ್ರದ ಸತ್ಪ್ರಜೆಗಳಾಗಿ ನಿರ್ಮಾಣ ಮಾಡುವ ಬಹುದೊಡ್ಡ ಜವಾಬ್ದಾರಿ ಪೋಷಕರ ಮೇಲಿದೆ.

ಆಧುನಿಕ ಸ್ಪರ್ಧಾತ್ಮಕ ಜಗತ್ತಿಗೆ ಅವಶ್ಯಕವಾಗಿರುವ ವಿಜ್ಞಾನ ಮತ್ತು ತಂತ್ರಜ್ಞಾನದ ಸಮರ್ಪಕ ಜ್ಞಾನವನ್ನು ನೀಡಿ ತಮ್ಮ ಉತ್ತಮ ಬದುಕಿಗೆ ಇವುಗಳನ್ನು ಮೆಟ್ಟಿಲುಗಳಾಗಿ ಬಳಸುವಂತೆ ಮಾಡಬೇಕಾಗುತ್ತದೆ. ನಮ್ಮ ಬದುಕಿನ ಉನ್ನತಿಗೆ ವಿಜ್ಞಾನ ಮತ್ತು ತಂತ್ರಜ್ಞಾನವೇ ಹೊರತು, ವಿಜ್ಞಾನ ಮತ್ತು ತಂತ್ರಜ್ಞಾನಕ್ಕಲ್ಲ. ಈ ಅಮೂಲ್ಯ ಬದುಕು ಎಂಬ ಕಹಿ ಸತ್ಯವನ್ನು ತಿಳಿಯುವಂತೆ ಮಾಡಬೇಕು. ಜ್ಞಾನ, ಮನೋಭಾವ ಮತ್ತು ಕೌಶಲ್ಯಾಭಿವೃದ್ಧಿಗೆ ಹೆಚ್ಚಿನ ಮಹತ್ವ ನೀಡಬೇಕು. ಕುಟುಂಬದ ಸಂಬಂಧಿಕರನ್ನು ಪರಿಚಯಿಸಬೇಕು, ಅವರೊಂದಿಗೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳುವಂತೆ ಪ್ರೋತ್ಸಾಹಿಸಬೇಕು. ಪೋಷಕರು ತಮ್ಮ ಹುಟ್ಟೂರು, ಮನೆ, ತೋಟ, ಗದ್ದೆ, ಹೊಲ, ಕೆರೆ ಮುಂತಾದವುಗಳನ್ನು ಪರಿಚಯಿಸಿ ಅವುಗಳ ಮಹತ್ವವನ್ನು ತಿಳಿಹೇಳಬೇಕು. ಪರಿಸರದೊಂದಿಗೆ ಬದುಕನ್ನು ಕಟ್ಟಿಕೊಳ್ಳುವ ಮನಸ್ಥಿತಿಯನ್ನು ಸದೃಢಗೊಳಿಸಬೇಕು. ಗ್ರಾಮೀಣ ಸೊಗಡನ್ನು ಮಕ್ಕಳ ವ್ಯಕ್ತಿತ್ವದಲ್ಲಿ ಮೇಳೈಸುವಂತೆ ಮಾಡುವ ಬಹುದೊಡ್ಡ ಜವಾಬ್ದಾರಿ ಪೋಷಕರ ಮೇಲಿದೆ. ಸಮಾಜಮುಖಿಯಾದ ಬದುಕನ್ನು ಕಟ್ಟಿಕೊಳ್ಳಲು ಬೇಕಾದ ಎಲ್ಲವನ್ನು ಪೋಷಕರು ತಮ್ಮ ಮಕ್ಕಳಿಗೆ ಒದಗಿಸಬೇಕು. ಮಕ್ಕಳಿಗಾಗಿ ಆಸ್ತಿ ಮಾಡುವುದಕ್ಕಿಂತ ಅವರನ್ನೇ ಆಸ್ತಿಗಳನ್ನಾಗಿ ಮಾಡುವುದು ಪ್ರತಿಯೊಬ್ಬ ಪೋಷಕರ ಕರ್ತವ್ಯವೇ ಆಗಿದೆ. ಈ ನಿಟ್ಟಿನಲ್ಲಿ ಬೇಸಿಗೆ ರಜೆಯನ್ನು ರಚನಾತ್ಮಕವಾಗಿ ಬಳಸಿಕೊಳ್ಳುವಲ್ಲಿ ಪೋಷಕರು ನೆರವಾಗುವುದು ಅತ್ಯಂತ ಮಹತ್ವದ ವಿಚಾರವೇ ಆಗಿದೆ. ದೈಹಿಕ, ಮಾನಸಿಕ, ಸಾಮಾಜಿಕ ಮತ್ತು ಭಾವನಾತ್ಮಕ ಸದೃಢ ವ್ಯಕ್ತಿಗಳಿಂದ ಮಾತ್ರ ರಾಷ್ಟ್ರದ ಅಭಿವೃದ್ಧಿ ಸಾಧ್ಯ ಎಂಬುದನ್ನು ಅರಿತುಕೊಂಡು ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವುದು ಇಂದಿನ ಅನಿವಾರ್ಯಗಳಲ್ಲಿ ಒಂದೆನಿಸಿದೆ. ●

# ಅಡುಗೆ ಮನೆಯಲ್ಲಿ ರಸಾಯನಶಾಸ್ತ್ರ



■ ಮಹಾಂತೇಶ ರಾಮಪ್ಪಾ ಕುಂಬಾರ
ಸಹಶಿಕ್ಷಕರು, ಕರ್ನಾಟಕ ಪಬ್ಲಿಲ್ ಶಾಲೆ,
ಕೌಜಲಗಿ, ಗೋಕಾಕ ತಾಲ್ಲೂಕು




ರಸಾಯನಶಾಸ್ತ್ರವೆಂದರೆ ಅದೊಂದು ಸೋಜಿಗದ ಜಗತ್ತು. ಅದರ ಹರಿವು ಬಹಳ ವಿಶಾಲವಾದದ್ದು. ರಾಸಾಯನಿಕಗಳಿಲ್ಲದೇ ನಮ್ಮ ಬದುಕನ್ನು ಊಹಿಸಲು ಕಷ್ಟಸಾಧ್ಯ. ಅದರಲ್ಲೂ ನಮ್ಮ ಇಡೀ ದೇಹವೇ 'ರಾಸಾಯನಿಕಗಳ ಕಾರ್ಖಾನೆ' ಎಂದು ಕರೆಯಲ್ಪಡುತ್ತದೆ. ನಮ್ಮ ಆಹಾರದ ಘಟಕಗಳು ರಾಸಾಯನಿಕಗಳಿಂದಾಗಿವೆ. ಇಂದು ನಮ್ಮ ಮನೆಗಳ ಅಡುಗೆ ಮನೆಯಲ್ಲಿ ರಸಾಯನಶಾಸ್ತ್ರದ ಬಗ್ಗೆ ಈ ಲೇಖನದಲ್ಲಿ ತಿಳಿದುಕೊಳ್ಳೋಣ ಬನ್ನಿ.

ಈರುಳ್ಳಿ ಕತ್ತರಿಸುವಾಗ ಜನರು ಏಕೆ ಅಳುತ್ತಾರೆ ಎಂದು ನೀವು ಎಂದಾದರೂ ಯೋಚಿಸಿದ್ದೀರಾ? ನೀವು ಅದೇ ಆಹಾರವನ್ನು ಬೇರೆ ಯಾವುದೇ ಪಾತ್ರೆಯಲ್ಲಿ ಬೇಯಿಸಬಹುದಾದಾಗ ಒತ್ತಡದ ಕುಕ್ಕರ್‌ನಿಂದ ಏನು ಪ್ರಯೋಜನ? ತರಕಾರಿಗಳು ಏಕೆ ಪ್ರಕಾಶಮಾನವಾಗಿವೆ? ಒಂದು ಸಾಮಾನ್ಯ ಉತ್ತರಕ್ಕೆ ಕಾರಣವಾಗುವ ಇಂತಹ ಹಲವು ಪ್ರಶ್ನೆಗಳಿಗೆ ಉತ್ತರಗಳು ರಸಾಯನಶಾಸ್ತ್ರದಲ್ಲಿವೆ.

ರಸಾಯನಶಾಸ್ತ್ರವು ಬೀಕರ್‌ಗಳು ಮತ್ತು ಲ್ಯಾಬ್‌ಗಳಿಗೆ ಸೀಮಿತವಾಗಿಲ್ಲ. ಇದು ನಿಮ್ಮ ಸುತ್ತಲೂ ಮತ್ತು ನಿಮ್ಮೊಳಗೆ ಇದೆ! ನೀವು ರಸಾಯನಶಾಸ್ತ್ರವನ್ನು ಚೆನ್ನಾಗಿ ತಿಳಿದಿರುವಿರಿ, ನೀವು ಜಗತ್ತನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತೀರಿ. ಆದ್ದರಿಂದ ಇಂದು, ಅಡುಗೆ ಮನೆಯನ್ನು ಅನ್ವೇಷಿಸೋಣ ಮತ್ತು ದೈನಂದಿನ ಜೀವನದಲ್ಲಿ ರಸಾಯನಶಾಸ್ತ್ರವು ನಮ್ಮನ್ನು ಹೇಗೆ ಸುತ್ತುವರೆದಿದೆ ಎಂಬುದನ್ನು ಅರ್ಥಮಾಡಿಕೊಳ್ಳೋಣ.

ಈರುಳ್ಳಿ ಏಕೆ ಇಂತಹ ಕಿರಿಕಿರಿಯನ್ನು ಉಂಟುಮಾಡುತ್ತದೆ ಎಂದು ಎಂದಾದರೂ ಯೋಚಿಸಿದ್ದೀರಾ? ವಿಜ್ಞಾನಿಗಳು ಅದನ್ನು ಹೇಗೆ ವಿವರಿಸುತ್ತಾರೆ ಎಂಬುದು ಇಲ್ಲಿದೆ.

ನಾವು ಈರುಳ್ಳಿಯನ್ನು ಕತ್ತರಿಸಿದಾಗ, ಈರುಳ್ಳಿಯೊಳಗಿನ ಜೀವಕೋಶಗಳು ಒಡೆಯುತ್ತವೆ, ಪರಿಣಾಮವಾಗಿ ಅಲಿನೇಸ್ ಎಂಬ ಕಿಣ್ವವನ್ನು ಬಿಡುಗಡೆ ಮಾಡುತ್ತದೆ . ಈ ಕಿಣ್ವವು ಸಿನ್–ಪ್ರೊಪನೆಥಿಯಲ್–ಎಸ್–ಆಕ್ಸೈಡ್ ಎಂಬ ರಾಸಾಯನಿಕವನ್ನು ಉತ್ಪಾದಿಸುತ್ತದೆ, ಅದು ಈರುಳ್ಳಿಗೆ ಅದರ ವಿಶಿಷ್ಟ ಸುವಾಸನೆಯನ್ನು ನೀಡುತ್ತದೆ. ಈ ಕೆಲವು ರಾಸಾಯನಿಕಗಳು ಕಣ್ಣೀರಿಗೆ ಕಾರಣವಾಗುವ ಲ್ಯಾಕ್ರಿಮೇಟರಿ ಏಜೆಂಟ್ ಆಗಿ ಕಾರ್ಯನಿರ್ವಹಿಸುತ್ತವೆ. ರಾಸಾಯನಿಕ ಸಿನ್–ಪ್ರೊಪನೆಥಿಯಲ್–ಎಸ್–ಆಕ್ಸೈಡ್ ನಮ್ಮ ಕಣ್ಣುಗಳ ಮುಂಭಾಗ ಅಥವಾ ಕಾರ್ನಿಯಾದೊಂದಿಗೆ ಸಂಪರ್ಕಕ್ಕೆ ಬಂದಾಗ, ಅಲ್ಲಿ ಇರುವ ನರ ತುದಿಗಳು ಕಿರಿಕಿರಿಯ ಬಗ್ಗೆ ಮೆದುಳಿಗೆ ಸಂದೇಶಗಳನ್ನು ಕಳುಹಿಸುತ್ತವೆ. ನಂತರ ಮೆದುಳು ಕಣ್ಣೀರನ್ನು ಬಿಡುಗಡೆ ಮಾಡಲು ಮತ್ತು ಕಣ್ಣುಗಳನ್ನು ರಕ್ಷಿಸಲು ಕಣ್ಣೀರಿನ ಗ್ರಂಥಿಗಳಿಗೆ ಸಂಕೇತಿಸುತ್ತದೆ.

ಇದು ಅದರ ಹೆಸರಿಗೆ ತಕ್ಕಂತೆ ಇರುವ ಒಂದು ಉತ್ಪನ್ನವಾಗಿದೆ! ಇದು ತ್ವರಿತವಾಗಿ ಬೇಯಿಸಲು ಆಹಾರವನ್ನು ಒತ್ತಾಯಿಸುತ್ತದೆ! ಫ್ರೆಂಚ್ ಭೌತಶಾಸ್ತ್ರಜ್ಞ ಡೆನಿಸ್ ಪಾಪಿನ್ ಅವರು ಮೇ 22, 1679 ರಂದು ರಾಯಲ್ ಸೊಸೈಟಿಯ ಮುಂದೆ "ಮೂಳೆಗಳನ್ನು ಮೃದುಗೊಳಿಸುವ ಹೊಸ ಡೈಜೆಸ್ಟರ್" ಅನ್ನು ಮೊದಲು ಪ್ರದರ್ಶಿಸಿದಾಗ, ಆಧುನಿಕ ಅಡುಗೆಮನೆಯಲ್ಲಿ ಅದರ ಬಳಕೆಯ ಬಗ್ಗೆ ಅವರಿಗೆ ತಿಳಿದಿರಲಿಲ್ಲ. ಇಂದು ಪ್ರೆಶರ್ ಕುಕ್ಕರ್ ಅನ್ನು ಅಡುಗೆ ಪ್ರಕ್ರಿಯೆಯನ್ನು ವೇಗಗೊಳಿಸಲು ಬಳಸಲಾಗುತ್ತದೆ ಏಕೆಂದರೆ ಇದು ಬೇಯಿಸಲು ಕಡಿಮೆ ಸಮಯ ತೆಗೆದುಕೊಳ್ಳುತ್ತದೆ. ಆದರೆ ಇದರ ಹಿಂದಿನ ರಹಸ್ಯವೇನು?

ಪ್ರೆಶರ್ ಕುಕ್ಕರ್ ಮಾರ್ಪಡಿಸಿದ ಮುಚ್ಚಳವನ್ನು ಹೊಂದಿದ್ದು ಅದು ಸೀಲ್ ಅನ್ನು ರಚಿಸಲು ರಬ್ಬರ್ ಗ್ಯಾಸ್ಕೆಟ್ ಮೇಲೆ ಲಾಕ್ ಮಾಡುತ್ತದೆ. ನಾವು ಅದರೊಳಗೆ ಆಹಾರವನ್ನು ಬೇಯಿಸಿದಾಗ, ಅದು ನೀರಿನಿಂದ ಉಗಿಯನ್ನು ಉತ್ಪಾದಿಸುತ್ತದೆ. ಹಡಗಿನಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದೆ, ಆವಿಯು ಊಟದ ಅಡುಗೆ ತಾಪಮಾನಕ್ಕಿಂತ ಹೆಚ್ಚಾಗುವ ಒತ್ತಡವನ್ನು ನಿರ್ಮಿಸಲು ಪ್ರಾರಂಭಿಸುತ್ತದೆ, ಹೀಗಾಗಿ ಅಡುಗೆ ಪ್ರಕ್ರಿಯೆಯನ್ನು ವೇಗಗೊಳಿಸುತ್ತದೆ.

ತರಕಾರಿಗಳು ಮತ್ತು ಹಣ್ಣುಗಳಲ್ಲಿನ ಗಾಢವಾದ ಬಣ್ಣಗಳು ರಸಾಯನಶಾಸ್ತ್ರದ ಸಂಪೂರ್ಣ ಕೆಲಸವಾಗಿದೆ. ಹೇಗೆ ಎಂದು ಯೋಚಿಸುತ್ತಿದ್ದೀರಾ?

ತರಕಾರಿಗಳು ಮತ್ತು ಹಣ್ಣುಗಳು ಫೈಟೊನ್ಯೂಟ್ರಿಯೆಂಟ್ಸ್ ಎಂದು ಕರೆಯಲ್ಪಡುವ ಸಾವಿರಾರು ನೈಸರ್ಗಿಕ ರಾಸಾಯನಿಕಗಳನ್ನು ಹೊಂದಿರುತ್ತವೆ ('ಫೈಟೊ' ಸಸ್ಯಕ್ಕೆ ಗ್ರೀಕ್ ಪದವನ್ನು ಸೂಚಿಸುತ್ತದೆ), ಇದನ್ನು ಫೈಟೊಕೆಮಿಕಲ್ಸ್ ಎಂದೂ ಕರೆಯುತ್ತಾರೆ. ಈ ರಾಸಾಯನಿಕ ಸಂಯುಕ್ತಗಳು ಸಸ್ಯಗಳನ್ನು ಸೂಕ್ಷ್ಮಜೀವಿಗಳು, ಶಿಲೀಂಧ್ರಗಳು, ದೋಷಗಳು ಮತ್ತು ಇತರ ಬೆದರಿಕೆಗಳಿಂದ ರಕ್ಷಿಸುತ್ತವೆ ಮತ್ತು ಈ ಹಣ್ಣುಗಳು ಮತ್ತು ತರಕಾರಿಗಳಿಗೆ ಅವುಗಳ ಶ್ರೀಮಂತ ಬಣ್ಣಗಳು, ವಿಶಿಷ್ಟ ರುಚಿಗಳು ಮತ್ತು ಪರಿಮಳವನ್ನು ನೀಡುತ್ತವೆ. ಅವುಗಳ ಬಣ್ಣಗಳು ಮತ್ತು ನಿರ್ದಿಷ್ಟ ಫೈಟೊನ್ಯೂಟ್ರಿಯೆಂಟ್‌ಗಳ ಉಪಸ್ಥಿತಿಯಿಂದ ವಿಂಗಡಿಸಲಾದ ಹಣ್ಣುಗಳು ಮತ್ತು ತರಕಾರಿಗಳ ಚಾರ್ಟ್ ಇಲ್ಲಿದೆ.

ವಯಸ್ಕರು ಎಚ್ಚರವಾಗಿರಲು ಮತ್ತು ಎಚ್ಚರವಾಗಿಸಲು ಕಾಫಿ ಕುಡಿಯಲು ಬಯಸುತ್ತಾರೆ ಎಂದು ನಮಗೆಲ್ಲರಿಗೂ ತಿಳಿದಿದೆ. ಆದರೆ ಇದರ ಹಿಂದಿನ ಜೀವರಸಾಯನಶಾಸ್ತ್ರ ನಿಮಗೆ ತಿಳಿದಿದೆಯೇ?

ಕಾಫಿಯಲ್ಲಿನ ಸಕ್ರಿಯ ಅಂಶವೆಂದರೆ 'ಕೆಫೀನ್' ಎಂಬ ವಸ್ತು. ನೈಸರ್ಗಿಕ ಉತ್ತೇಜಕ, ಕೆಫೀನ್ ನಮ್ಮ ಮೆದುಳಿನ ರಸಾಯನಶಾಸ್ತ್ರವನ್ನು ಬದಲಾಯಿಸುವ ಮೂಲಕ ಕೆಲಸ ಮಾಡುತ್ತದೆ! ನಿರ್ದಿಷ್ಟವಾಗಿ,

ಪುಟ 10 ಕ್ಕೆ ➤

# ಏಕಾತ್ಮತಾಸ್ತೋತ್ರ



ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು

**ಪ್ರಯಾಗಃಪಾಟಲೀಪುತ್ರಂವಿಜಯಾನಗರಂಮಹತ್ ।**
**ಇಂದ್ರಪ್ರಸ್ಥಂಸೋಮನಾಥಃತಥಾಅಮೃತಸರಃಪ್ರಿಯಮ್ ॥**
**ಚತುರ್ವೇದಾಃಪುರಾಣಾನಿಸರ್ವೋಪನಿಷದಸ್ತಥಾ।**
**ರಾಮಾಯಣಂಭಾರತಂ ಚ ಗೀತಾಸದ್ದರ್ಶನಾನಿ ಚ॥**
**ಜೈನಾಗಮಾಸ್ತ್ರಿಪಿಟಕಾಗುರುಗ್ರಂಥಃಸತಾಂಗಿರಃ ।**
**ಏಷಜ್ಞಾನನಿಧಿಃಶ್ರೇಷ್ಠಃಶ್ರದ್ಧೇಯೋಹೃದಿಸರ್ವದಾ ॥**

ಒಂದುಕಾಲಕ್ಕೆ ವಿಶ್ವಗುರು ಎನಿಸಿದ್ದ ಭಾರತದ ಮಣ್ಣಿನ ಕಣಕಣವೂ ಪವಿತ್ರವಾದುದು. ಮಹಾ ಮಹಾಪುರುಷರಿಗೆ., ಮಹಿಳೆಯರಿಗೆ ಜನ್ಮನೀಡಿದ ಪವಿತ್ರ ಭೂಮಿಯಿದು .ಜೀವನಮೌಲ್ಯಗಳ, ಸಂಸ್ಕೃತಿಯನ್ನು ಇಡೀ ವಿಶ್ವಕ್ಕೇ ಕೊಡುಗೆಯಾಗಿತ್ತು ತನ್ನ ಹಿರಿಮೆಯನ್ನು ಸಾರಿದನಾಡು ಇದಾಗಿದೆ. ದೇಶದ ಉದ್ದಗಲಕ್ಕೂ ಹರಿಯುತ್ತಿರುವ ಇಲ್ಲಿನ ನದಿಗಳ ಸೌಂದರ್ಯ ಒಂದುಕಡೆ ನೋಡುಗರ ಮನತಣಿಸಿದರೆ ಮತ್ತೊಂದು ದೃಷ್ಟಿಯಿಂದ ಅವುಗಳಲ್ಲಿ ಅಡಗಿರುವ ಪೌರಾಣಿಕ ಕಥೆಗಳು ಮನದಲ್ಲಿ ಧಾರ್ಮಿಕ ಭಾವನೆಗಳನ್ನು ಜಾಗೃತಗೊಳಿಸುತ್ತವೆ. ಪ್ರಕೃತಿ ಸೌಂದರ್ಯದ ಜೊತೆಜೊತೆಗೇ ದೇಶದ ಭೌಗೋಳಿಕ ಪರಿಸರದ ವ್ಯಾಪಕ ಪರಿಚಯವನ್ನು ಮಾಡಿಕೊಳ್ಳುವ ಅವಕಾಶವೂ ಒದಗುತ್ತದೆ.

ಧಾರ್ಮಿಕ ಕೇಂದ್ರಗಳಲ್ಲಿನ ಪುಣ್ಯ ನದಿಗಳಲ್ಲಿ ಮಿಂದು ಪಾವನರಾಗುತ್ತೇವೆಂಬ ನಂಬಿಕೆಯಿರುವ ಹಿಂದೂಗಳಿಗೆ ದೇವನದಿಯೆನಿಸಿರುವ ಗಂಗಾನದಿಯ ಬಗ್ಗೆ ಬಹಳ ಪೂಜ್ಯಭಾವನೆಯಿದೆ. ಜೊತೆಗೆ ಗಂಗಾನದಿಯೊಂದಿಗೆ ಯಮುನಾ ಮತ್ತು ಸರಸ್ವತೀ ನದಿಗಳು ಸೇರುವ ಸಂಗಮ ಸ್ಥಳದಲ್ಲಿ ಸ್ನಾನ ಮಾಡುವುದರಿಂದ ಪುಣ್ಯಪ್ರಾಪ್ತಿಯಾಗುವುದೆಂದೂ, ಹಾಗೂ ಅಲ್ಲಿ ಪಿತೃಕಾರ್ಯಗಳನ್ನು ಮಾಡುವುದರಿಂದ ಅವರ ಆತ್ಮಕ್ಕೆ ಸದ್ಗತಿಯಾಗುವುದೆಂದೂ ಬಲವಾದನಂಬಿಕೆಯಿದೆ. ಪ್ರಯಾಗವು (ಮೊದಲಿನ ಹೆಸರು ಅಲಹಾಬಾದ್) ಇಂತಹ ಪವಿತ್ರಕ್ಷೇತ್ರವಾಗಿದ್ದು ದೇಶದ ಎಲ್ಲೆಡೆಯಿಂದ ಭಕ್ತಾದಿಗಳನ್ನು ತನ್ನತ್ತ ಸೆಳೆದುಕೊಳ್ಳುತ್ತಿದೆ. ನಿಗದಿತ ವರ್ಷಗಳಿಗೊಮ್ಮೆ ಇಲ್ಲಿ ನಡೆಯುವ ಕುಂಭಮೇಳವು ಲಕ್ಷಾಂತರ ಜನರನ್ನು ಬರಮಾಡಿಕೊಳ್ಳುವ ಸಂಭ್ರಮದ ಮೇಳವಾಗಿದೆ. ಪಾಟಲೀಪುತ್ರ, ವಿಜಯನಗರ, ಇಂದ್ರಪ್ರಸ್ಥವೆಂಬ ಸ್ಥಳಗಳು ಇತಿಹಾಸ ಪ್ರಸಿದ್ಧವೆನಿಸಿದ್ದು, ಅನೇಕ ರಾಜವಂಶಗಳು ತಮ್ಮ ದಕ್ಷ ಆಡಳಿತದೊಂದಿಗೆ ದೇಶದ ಸರ್ವತೋಮುಖ ಪ್ರಗತಿಗೆ ಕಾರಣರಾದುದನ್ನು ಸಾರುವ ಹಲವಾರು ಸಾಕ್ಷ್ಯಗಳನ್ನು ಇಂದಿಗೂ ತೋರುತ್ತಿವೆ. ಇನ್ನು ಸೋಮನಾಥವು ದ್ವಾದಶ ಲಿಂಗಗಳಲ್ಲಿ ಒಂದಾದ ಸೋಮನಾಥೇಶ್ವರನ ದೇವಾಲಯವಿರುವ ಪ್ರಸಿದ್ಧ ಪವಿತ್ರಕ್ಷೇತ್ರವಾಗಿದ್ದು, ಅಮೃತಸರವು ಸಿಖ್ ಜನಾಂಗದ ಪವಿತ್ರಸ್ಥಳವಾಗಿದ್ದು ಅಲ್ಲಿನ ಸ್ವರ್ಣಮಂದಿರವು ವಿಶ್ವಪ್ರಸಿದ್ಧವಾಗಿದೆ. ತನ್ನಅದ್ಭುತವಾದ ಸೌಂದರ್ಯದಿಂದ ಎಲ್ಲರನ್ನೂ ಆಕರ್ಷಿಸುತ್ತ ಒಂದು ಪ್ರವಾಸೀತಾಣವೂ ಆಗಿ ಖ್ಯಾತಿಹೊಂದಿದೆ.

ಬಹುಧರ್ಮಗಳ, ಬಹುಭಾಷೆಗಳ, ಬಹುಸಂಸ್ಕೃತಿಗಳ ದೇಶವಾಗಿದ್ದರೂ ತನ್ನ ಐಕ್ಯತೆಯನ್ನು ಕಾಪಾಡಿಕೊಂಡು ಬಂದಿರುವ ನಮ್ಮ ಭಾರತ ದೇಶವು ಅಗಾಧವಾದ ಬೌದ್ಧಿಕ ಸಂಪತ್ತನ್ನು ಹೊಂದಿದ್ದು, ವೇದಗಳೆಂಬ ಜ್ಞಾನಭಂಡಾರವನ್ನೇ ಜಗತ್ತಿಗೆ ನೀಡಿದೆ. ಅದು ಸಾರ್ವಕಾಲಿಕವೂ ಅಮೂಲ್ಯವೂ ಆದ ಬೌದ್ಧಿಕ ಸಂಪತ್ತೆನಿಸಿಕೊಂಡಿದೆ. ವೇದಗಳೊಂದಿಗೆ ನಮ್ಮ ಋಷಿಮುನಿಗಳಿಂದ ಕೊಡುಗೆಯಾಗಿ ಬಂದಿರುವ ಉಪನಿಷತ್ತುಗಳು, ರಾಮಾಯಣ, ಮಹಾಭಾರತದಂತಹ ಅಮೂಲ್ಯ ನೀತಿಕಾವ್ಯಗಳು, ಭಗವದ್ಗೀತೆಯಂತಹ ಅದ್ಭುತವಾದ ಜೀವನಮೌಲ್ಯಗಳನ್ನು ಸಾರುವಜ್ಞಾನ ಸಂಪತ್ತು ಇಡೀಮಾನವ ಕುಲಕ್ಕೇ ಗುರುಸ್ವರೂಪಿಗಳಾಗಿವೆ. ಇವುಗಳೊಂದಿಗೆ ಬೌದ್ಧರ ಧರ್ಮಗ್ರಂಥಗಳಾದ ತ್ರಿಪಿಟಕಗಳು,ಸಿಖ್ ಜನಾಂಗದ ಗುರುಗ್ರಂಥ, ಜೈನರ ಆಗಮಗಳು ಎಲ್ಲವೂ ಮಾನವಕುಲಕ್ಕೆ ಮಾರ್ಗದರ್ಶನವನ್ನು ನೀಡುತ್ತಬಂದಿವೆ. ಎಲ್ಲದರ ಉದ್ದೇಶವು ಲೋಕಕಲ್ಯಾಣವೇ ಆಗಿದ್ದು ಅದನ್ನು ಸಾಧಿಸುವ ಮಾರ್ಗಗಳು ಮಾತ್ರ ಬೇರೆ ಬೇರೆಯಾಗಿವೆ. ಇಂತಹ ಅಮೂಲ್ಯ ಸಂಪತ್ತುಗಳನ್ನು ಹೊಂದಿರುವ ಪುಣ್ಯಭೂಮಿ ನಮ್ಮ ಭಾರತ ದೇಶವಾಗಿದ್ದು ಅಲ್ಲಿ ಜನಿಸಿರುವ ನಾವು ಧನ್ಯತೆಯನ್ನು ಹೊಂದಿದ್ದೇವೆ. ಇವುಗಳು ಸಾರುವ ಅಂಶಗಳನ್ನು ಸದಾ ನಮ್ಮ ಮನದಲ್ಲಿ ಶ್ರದ್ಧೆಯೊಂದಿಗೆ ಕಾಪಾಡಿಕೊಳ್ಳೋಣ. ●

## ಮಹಿಳೆಯರ ಕುರಿತು ಸರ್ವಜ್ಞನ ವಚನಗಳು

1. ಒಪ್ಪವುಳ್ಳ ಹೆಣ್ಣಲ್ಲಿ ತಪ್ಪ ಸಾಧಿಸಬೇಡ ಕರ್ಪೂರದ ಮೇಲೆ ಕಸವಿರಲು ಅದನೊಪ್ಪರೊಪ್ಪದವರುಂಟೇ ಸರ್ವಜ್ಞ
2. ಹೆಣ್ಣಿನಿಂದಲೇ ಇಹವು ಹೆಣ್ಣಿನಿಂದಲೇ ಪರವು ಹೆಣ್ಣಿಂದಲೇ ಸಕಲ ಸಂಪದವು ಹೆಣ್ಣೊಲ್ಲ ದಣ್ಣಗಳು ಯಾರು ಸರ್ವಜ್ಞ
3. ತಾಯಿಯೆಂಬೆನಲ್ಲದೆ ತಾಯಿ ನಾನೆಂಬೆನೆ? ತಾಯಿಯೆಂದಾನು ನುಡಿದೇನು ಪರಸ್ತ್ರೀಯ ತಾಯಿಯೆಂದೆಂಬೆ ಸರ್ವಜ್ಞ
4. ಸತ್ಯಕ್ಕೆ ಸರಿಯಿಲ್ಲ ಮಿಥ್ಯಕ್ಕೆ ನೆಲೆಯಿಲ್ಲ ಹೆತ್ತಮ್ಮನಿಗಿಂತ ಹಿತರಿಲ್ಲ ನರರೊಳಗೆ ನಿತ್ಯರೇ ಇಲ್ಲ ಸರ್ವಜ್ಞ
5. ಹೆಣ್ಣನ್ನು ಹೊನ್ನನ್ನು ಹಣ್ಣಾದ ಮರಗಳನು ಕಣ್ಣಿನಲ್ಲಿ ಕಂಡು ಮನದಲಿ ಬಯಸದಿಹ ಅಣ್ಣಗಳು ಯಾರು ಸರ್ವಜ್ಞ
6. ಬೆಚ್ಚನಾ ಮನೆಯಾಗೆ ವೆಚ್ಚಕ್ಕೆ ಹೊನ್ನಾಗಿ, ಇಚ್ಛೆಯನ್ನರಿವ ಸತಿಯಾಗಿ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ
7. ಮೊಸರು ಇಲ್ಲದ ಊಟ, ಕೆಸರು ಇಲ್ಲದ ಗದ್ದೆ, ಹಸನವಿಲ್ಲದವಳ ಮನೆವಾರ್ತೆ ತಿಪ್ಪೆಯ ಕಸದಂತೆ ಸರ್ವಜ್ಞ

➢ ಪುಟ 8 ರಿಂದ.....

ಮೆದುಳಿನ ನರ ಕೋಶಗಳು ಅಥವಾ ನರಕೋಶಗಳು. ನರಪ್ರೇಕ್ಷಕಗಳು ಎಂಬ ವಸ್ತುವನ್ನು ಬಳಸಿಕೊಂಡು ನರಕೋಶಗಳು ಪರಸ್ಪರ ಸಂವಹನ ನಡೆಸುತ್ತವೆ. ಪ್ರತಿಯೊಂದು ನರಪ್ರೇಕ್ಷಕ ಅಣುವು ನೆರೆಯ ನರ ಕೋಶದ ಮೇಲೆ ಕೇವಲ ಒಂದು ನಿರ್ದಿಷ್ಟ ರೀತಿಯ 'ಗ್ರಾಹಕ'ಕ್ಕೆ ಹೊಂದಿಕೊಳ್ಳುತ್ತದೆ. ಇದು ಜೀವರಾಸಾಯನಿಕ ಜಿಗ್ಸಾ ಪಜಲ್‌ನಂತೆ ಯೋಚಿಸಿ!

ಅಂತಹ ಒಂದು ನರಪ್ರೇಕ್ಷಕವನ್ನು ಅಡೆನೊಸಿನ್ ಎಂದು ಕರೆಯಲಾಗುತ್ತದೆ, ಇದರ ಕೆಲಸವು ನರಗಳ ಚಟುವಟಿಕೆಯನ್ನು ಕಡಿಮೆ ಮಾಡುವುದು ಮತ್ತು ರಕ್ತನಾಳಗಳನ್ನು ಹಿಗ್ಗಿಸುವುದು – ನೀವು ನಿದ್ರಿಸುತ್ತಿರುವಾಗ ಸಂಭವಿಸುತ್ತದೆ. ಆದರೆ ಕೆಫೀನ್ ಅಡೆನೊಸಿನ್‌ನಂತೆಯೇ ಕಾಣುತ್ತದೆ, ಅದರ ಪರಿಣಾಮಗಳು ನಿಖರವಾಗಿ ವಿರುದ್ಧವಾಗಿರುತ್ತವೆ! ಕೆಫೀನ್ ನರಗಳ ಚಟುವಟಿಕೆಯನ್ನು ಹೆಚ್ಚಿಸುತ್ತದೆ ಮತ್ತು ಅವುಗಳನ್ನು ಉರಿಯುತ್ತದೆ ಮತ್ತು ರಕ್ತನಾಳಗಳನ್ನು ಸಂಕುಚಿತಗೊಳಿಸುತ್ತದೆ.

ನರಕೋಶಗಳ ಈ ಹೆಚ್ಚಿದ ದಹನವು ಪಿಟ್ಯುಟರಿ ಗ್ರಂಥಿಯನ್ನು ಎಚ್ಚರಿಸುತ್ತದೆ, ಇದು ಅಡ್ರಿನಾಲಿನ್ ಉತ್ಪಾದನೆಯನ್ನು ಹೆಚ್ಚಿಸಲು ಮೂತ್ರಜನಕಾಂಗದ ಗ್ರಂಥಿಗಳನ್ನು ನಿರ್ದೇಶಿಸುತ್ತದೆ, 'ಹೋರಾಟ ಅಥವಾ ಹಾರಾಟದ ಹಾರ್ಮೋನ್'. ಇದು ನಿಮ್ಮ ಹೃದಯ ಬಡಿತ ಮತ್ತು ರಕ್ತದೊತ್ತಡದ ಹೆಚ್ಚಳದೊಂದಿಗೆ ನಿಮ್ಮ ವಿದ್ಯಾರ್ಥಿಗಳನ್ನು ಹಿಗ್ಗಿಸಲು ಕಾರಣವಾಗುತ್ತದೆ, ಇದು ಸಾಮಾನ್ಯವಾಗಿ ಒಂದು ಕಪ್ ಕಾಫಿಯೊಂದಿಗೆ ಸಂಬಂಧಿಸಿದ ಎಚ್ಚರಿಕೆಯ ಭಾವನೆಯನ್ನು ಉಂಟುಮಾಡುತ್ತದೆ.

ನಮ್ಮ ದಿನನಿತ್ಯದ ಚಟುವಟಿಕೆಗಳಲ್ಲಿ ರಸಾಯನಶಾಸ್ತ್ರವು ಪ್ರಮುಖ ಪಾತ್ರ ವಹಿಸುತ್ತದೆ. ವಾಸ್ತವವಾಗಿ, ನೀವು ಎದ್ದ ಕ್ಷಣದಿಂದ ಮತ್ತು ನೀವು ಮತ್ತೆ ಮಲಗುವ ಸಮಯದವರೆಗೆ ನಿಮ್ಮ ಕಣ್ಣುಗಳನ್ನು ತೆರೆದ ಕ್ಷಣದಿಂದ ಅದರ ಉಪಸ್ಥಿತಿಯನ್ನು ನೀವು ಗ್ರಹಿಸಬಹುದು.

**ಈರುಳ್ಳಿ ಮತ್ತು ಬೆಳ್ಳುಳ್ಳಿಯ ಬಗ್ಗೆ ಇನ್ನಷ್ಟು....**

ಈರುಳ್ಳಿ (ಆಲಿಯಮ್ ಸೆಪಾ) ಮತ್ತು ಬೆಳ್ಳುಳ್ಳಿ (ಆಲಿಯಮ್ ಸ್ಯಾಟಿವಮ್), ಅದೇ ಕುಲದ 'ಅಲಿಯಮ್'ಗೆ ಸೇರಿದ್ದು, ಅವುಗಳ ರಾಸಾಯನಿಕ ಸಂಯೋಜನೆಯಲ್ಲಿ ಬಹಳಷ್ಟು ಸಾಮ್ಯತೆಗಳಿವೆ, ಆದರೆ ಅವುಗಳ ಪ್ರತಿಕ್ರಿಯೆಗಳಲ್ಲಿ ಭಿನ್ನವಾಗಿರುತ್ತವೆ. ಈ ಪರಿಚಿತ ತರಕಾರಿಗಳ ಪ್ರತಿಯೊಂದು ಗಮನಿಸಬಹುದಾದ ಗುಣಲಕ್ಷಣವು ಸಲ್ಫರ್ ಅನ್ನು ಹೊಂದಿರುವ ಮೆಟಾಬಾಲೈಟ್‌ಗಳಿಂದ ಪ್ರಾರಂಭವಾದ ರಾಸಾಯನಿಕ ಪ್ರತಿಕ್ರಿಯೆಗಳಿಗೆ ಕಾರಣವಾಗಿದೆ.

ಈರುಳ್ಳಿ, ಅದರ ಕಣ್ಣೀರನ್ನು ಪ್ರಚೋದಿಸುವ ಸಾಮರ್ಥ್ಯಕ್ಕೆ ಕುಖ್ಯಾತವಾಗಿದೆ, ಇದು ಸಾಕಷ್ಟು ಆಕರ್ಷಕವಾಗಿದೆ. ಈರುಳ್ಳಿಯ ಮೆಸೊಫಿಲ್ ಅಂಗಾಂಶಗಳಲ್ಲಿ ವಿಶೇಷ ಅಮೈನೋ ಆಮ್ಲ 'ಐಸೋಲಿನ್' ಸಂಗ್ರಹವಾಗುತ್ತದೆ. ಇದರ ಸಾಮೀಪ್ಯದಲ್ಲಿ ಇತರ ರಾಸಾಯನಿಕ ಘಟಕಗಳೊಂದಿಗೆ 'ಅಲಿನೇಸ್' ಎಂಬ ಕಿಣ್ವವನ್ನು ಹೊಂದಿರುವ ನಾಳೀಯ ಬಂಡಲ್ ಪೊರೆ ಕೋಶಗಳಿವೆ.

ಈರುಳ್ಳಿ ಕತ್ತರಿಸಿದಾಗ, ಎರಡು ಅಂಗಾಂಶಗಳು ಛಿದ್ರವಾಗುತ್ತವೆ, ಇದು ರಾಸಾಯನಿಕಗಳ ನಡುವಿನ ಸಂಪರ್ಕಕ್ಕೆ ಕಾರಣವಾಗುತ್ತದೆ – ಐಸೋಲಿನ್ ಮತ್ತು ಅಲಿನೇಸ್. ಇದು ಪ್ರತಿಯಾಗಿ, ಶಕ್ತಿಯುತ ಲ್ಯಾಕ್ರಿಮೇಟರಿ ಅಂಶ "ಇ-ಥಿಯೋಪ್ರೊಪನಲ್-ಎಸ್-ಆಕ್ಸೈಡ್" ಉತ್ಪಾದನೆಗೆ ಕಾರಣವಾಗುತ್ತದೆ, ಇದು ಕಣ್ಣೀರನ್ನು ಉಂಟುಮಾಡುತ್ತದೆ. ಈ ಸಂಯುಕ್ತವು ನೀರಿಗೆ ದುರ್ಬಲವಾಗಿರುವುದರಿಂದ ಮತ್ತು ಕಡಿಮೆ ತಾಪಮಾನದಲ್ಲಿ ಚಂಚಲತೆಯನ್ನು ಕಡಿಮೆ ಮಾಡುವುದರಿಂದ, ಈ ಹಿಂದೆ ನೀರಿನಲ್ಲಿ ನೆನೆಸಿದ ಅಥವಾ ದೀರ್ಘಕಾಲ ಫ್ರಿಜ್‌ನಲ್ಲಿಟ್ಟ ಈರುಳ್ಳಿಯನ್ನು ಕತ್ತರಿಸುವುದರಿಂದ ಆ ಕಣ್ಣೀರನ್ನು ತೆಗೆದು ಹಾಕಬಹುದು.

ಮತ್ತೊಂದೆಡೆ, ಬೆಳ್ಳುಳ್ಳಿ ಅದರ ವಿಶಿಷ್ಟವಾದ ವಾಸನೆ ಮತ್ತು ಔಷಧೀಯ ಗುಣಗಳಿಗೆ ಹೆಸರುವಾಸಿಯಾಗಿದೆ. ಇದು 'ಅಲ್ಲಿನ್' ಎಂದು ಕರೆಯಲ್ಪಡುವ ಅಮೈನೋ ಆಮ್ಲ ಐಸೋಲಿನ್‌ನ ಸ್ವಲ್ಪ ರೂಪಾಂತರವನ್ನು ಸಹ ಒಳಗೊಂಡಿದೆ.

ಅಲಿನೇಸ್ ಕಿಣ್ವದ ಉಪಸ್ಥಿತಿಯಲ್ಲಿ ಅಲಿನ್, ಬೆಳ್ಳುಳ್ಳಿಯ ಬ್ಯಾಕ್ಟೀರಿಯಾ ವಿರೋಧಿ ಗುಣಲಕ್ಷಣಗಳಿಗೆ ಕಾರಣವಾದ ಸಂಯುಕ್ತವಾದ ಆಲಿಸಿನ್ ಆಗುತ್ತದೆ. ಬೆಳ್ಳುಳ್ಳಿ ಸೇರಿದಂತೆ ಆಹಾರಗಳು ಹೊಟ್ಟೆಯ ಹುಣ್ಣುಗಳಿಗೆ ಒಡ್ಡಿಕೊಳ್ಳುವುದನ್ನು ಕಡಿಮೆ ಮಾಡುತ್ತದೆ ಏಕೆಂದರೆ ಬೆಳ್ಳುಳ್ಳಿಯು ಹೊಟ್ಟೆಯ ಹುಣ್ಣುಗಳಿಗೆ ಕಾರಣವಾಗುವ ಜೀವಿಯಾದ ಹೆಲಿಕೋಬ್ಯಾಕ್ಟರ್ ಪೈಲೋರಿಯ ಬೆಳವಣಿಗೆಯನ್ನು ತಡೆಯುತ್ತದೆ.

ಪ್ಲೇಟ್‌ಲೆಟ್ ಒಟ್ಟುಗೂಡಿಸುವಿಕೆಯನ್ನು ಪ್ರತಿಬಂಧಿಸುವ ಪ್ರಬಲವಾದ ಆಂಟಿಥ್ರಂಬೋಟಿಕ್ ಚಟುವಟಿಕೆಯನ್ನು ಹೊಂದಿರುವ 'ಅಜೋನೆ' ನಂತಹ ಸಂಯುಕ್ತಗಳನ್ನು ಉತ್ಪಾದಿಸಲು ಆಲಿಸಿನ್ ಬಹಳಷ್ಟು ರಾಸಾಯನಿಕ ಮರುಜೋಡಣೆಗಳಿಗೆ ಒಳಗಾಗುತ್ತದೆ. ●

➢ ಪುಟ 5 ರಿಂದ.....

ಯಾವ ಸ್ಟ್ರೀಮ್ ತೆಗೆದುಕೊಳ್ಳುವುದು ಮತ್ತು ಯಾವ ಕಾಲೇಜಿಗೆ ಸೇರುವುದು ಎಂಬುದರ ನಿರ್ಧಾರವನ್ನು ಬಹಳ ಯೋಚನೆ ಮಾಡಿ ಸರಿಯಾದ ಮಾರ್ಗದರ್ಶನದಿಂದ ಆಯ್ಕೆ ಮಾಡಿಕೊಳ್ಳಬೇಕಾಗಿದೆ.

ನಿಮ್ಮ ಶಕ್ತಿ ಏನು? ಮತ್ತು ನಿಮ್ಮ ವೀಕ್‌ನೆಸ್ ಏನು? ಎಂಬುದರ ಅರಿವು ನಿಮಗೆ ಇರಬೇಕು. ಅಂಕಗಳಿಂದಲೇ ನಿಮ್ಮ ಸಾಮರ್ಥ್ಯವನ್ನು ಅಳೆಯಬೇಡಿ.

ಶಾಲೆಯಲ್ಲಿ ಸುಮಾರು ವರುಷಗಳಿಂದ ನಿಮ್ಮನ್ನು ನೋಡಿರುವ ನಿಮ್ಮ ಸಾಮರ್ಥ್ಯವನ್ನು ಬಹುಮಟ್ಟಿಗೆ ಅರ್ಥಮಾಡಿಕೊಂಡಿರುವ ನಿಮ್ಮ ಶಾಲೆಯ ಟೀಚರ್‌ಗಳು ಮತ್ತು ನಿಮ್ಮ ತಂದೆ- ತಾಯಿಗಳು ಬೇರೆಯವರೊಂದಿಗೆ ತಮ್ಮ ಮಕ್ಕಳನ್ನು ಹೋಲಿಕೆ ಮಾಡದಿರುವುದು ನಿಮಗೆ ಸರಿಯಾದ ಮಾರ್ಗದರ್ಶನವನ್ನು ನೀಡಬಲ್ಲರು ಎಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ. ಆದ್ದರಿಂದ ದಯವಿಟ್ಟು ಪಿಯುಸಿಗೆ ಸೇರುವಾಗ ಅವರ ಸಲಹೆಗಳನ್ನು ತೆಗೆದುಕೊಳ್ಳಲು ಮರೆಯದಿರಿ. ಆದರೆ ಅದು ನಿಮ್ಮ ಆಸಕ್ತಿಯೂ ಆಗಿರಬೇಕೆಂಬುದನ್ನು ನೆನಪಿಡಿ.

ನಿಮ್ಮ ಅಂಕಗಳಿಗೂ, ನಿಮ್ಮ ಸಾಮರ್ಥ್ಯಕ್ಕೂ ಖಂಡಿತಾ ಸಂಬಂಧವಿಲ್ಲ. ನಿಮ್ಮ ಸಾಮರ್ಥ್ಯ ನಿಮಗಷ್ಟೇ ಗೊತ್ತು. ಯಾರೋ ಅರೆಬರೆ ತಿಳಿದುಕೊಂಡವರ ಬೊಗಳೆ ಸಲಹೆಗಳನ್ನು ಖಂಡಿತಾ ನಿರಾಕರಿಸಿ.

ಒಟ್ಟಾರೆ ಹೇಳುವುದು ಏನೆಂದರೆ ಸರಿಯಾದ ಮಾರ್ಗದರ್ಶನದಿಂದ ನಿಮ್ಮ ಭವಿಷ್ಯವನ್ನು ಹಸನಾಗಿ ರೂಪಿಸಿಕೊಳ್ಳಿ ಎಂಬುದೇ ನನ್ನ ಆಶಯ. ●

# ಸಂಸ್ಕೃತಿಯ ನಿಜಾರ್ಥ

ಸಾಮಾನ್ಯವಾಗಿ ವ್ಯಕ್ತಿಗಳ ಬಗ್ಗೆ ಹೇಳುವಾಗ ಸುಸಂಸ್ಕೃತ, ಅಸಂಸ್ಕೃತ ಎಂಬ ಶಬ್ದಗಳನ್ನು ಉಪಯೋಗಿಸುತ್ತೇವೆ. ಬಸ್‌ನಲ್ಲಿ ಪಯಣಿಸುವಾಗ, ತರುಣನೊಬ್ಬ ವೃದ್ಧರೊಬ್ಬರಿಗೆ ತಾನು ಕುಳಿತ ಸ್ಥಾನವನ್ನು ಬಿಟ್ಟುಕೊಟ್ಟಾಗ ಅಥವಾ ರಸ್ತೆಯಲ್ಲಿ ನಡೆದು ಹೋಗುತ್ತಿರುವ ವ್ಯಕ್ತಿ ತನಗೆ ಬಾಲ್ಯದಲ್ಲಿ ಪಾಠ ಹೇಳಿದ ಶಿಕ್ಷಕರು ಎದುರಾದಾಗ ಸ್ಥಳ ಸಂದರ್ಭದ ಬಗ್ಗೆ ಗಮನ ಕೊಡದೆ ಕಾಲುಮುಟ್ಟಿ ನಮಸ್ಕರಿಸಿದಾಗ, ಎಂಥ ಸುಸಂಸ್ಕೃತ ಎಂಬ ಉದ್ಗಾರ ಹೊರಬರುತ್ತದೆ. ಅದೇ ವ್ಯಕ್ತಿಗಳು ಇದಕ್ಕೆ ತದ್ವಿರುದ್ಧವಾಗಿ ನಡೆದುಕೊಂಡಾಗ ಅಸಂಸ್ಕೃತ ಎಂಬ ಉದ್ಗಾರ.

ಸುಸಂಸ್ಕೃತ ಅಸಂಸ್ಕೃತ ಎಂಬ ಗುಣವಾಚಕ ಪದಗಳು ಸಂಸ್ಕೃತಿ ಎಂಬ ಶಬ್ಧದಿಂದ ಹುಟ್ಟಿದೆ. ಹಾಗಾದರೆ ಸಂಸ್ಕೃತಿ ಎಂದರೇನು? ಸಂಸ್ಕೃತಿ ಎಂಬ ಶಬ್ದಕ್ಕೆ ಜಗತ್ತಿನ ಹಲವು ವಿದ್ವಾಂಸರು ಬಗೆ ಬಗೆಯ ವ್ಯಾಖ್ಯೆಗಳನ್ನು ನೀಡಿದ್ದಾರೆ. ನಾಗರೀಕ ಜನಾಂಗದಲ್ಲಿ ಕಾಣಬರುವ ಅರಿವೇ ಜನತೆಯ ಸಂಸ್ಕೃತಿ ಎಂದು ಒಬ್ಬರ ಅಭಿಪ್ರಾಯವಾದರೆ ಒಂದು ದೇಶದಲ್ಲಿ ವಾಸಿಸುವ ವ್ಯಕ್ತಿಗಳ ಕುಲಗಳ ಗುಂಪುಗಳ ಪದ್ಧತಿಗಳು, ಆಚಾರ, ನಂಬಿಕೆಗಳು ಅಲ್ಲಿಯ ಜನತೆಯ ಸಂಸ್ಕೃತಿ ಎಂದು ಇನ್ನೊಬ್ಬ ವಿದ್ವಾಂಸರೆನ್ನುತ್ತಾರೆ. ಸಭ್ಯತೆ, ನಾಗರೀಕತೆ, ವಿನಯಶೀಲತೆ, ಗುಣಗ್ರಾಹಕತೆ, ಸತ್ಯನುಡಿಯುವಿಕೆ, ಗುರುದೇವತಾಭಕ್ತಿ, ದೇಶಾಭಿಮಾನ, ತ್ಯಾಗ, ಪರೋಪಕಾರ ಗುಣ, ಶುಚಿತ್ವ ಸ್ನೇಹಪರತೆ, ಪ್ರಾಣಿದಯೆ ಎಂಬಿತ್ಯಾದಿ ಹಲವು ಸದ್ಗುಣಗಳ ಪಾಕವನ್ನು ಸಂಸ್ಕೃತಿ ಎನ್ನಬಹುದು.

ಭಾರತೀಯ ಸಂಸ್ಕೃತಿಯಾದರೇ ಅತಿಪುರಾತನವಾದುದು. ಯುಗಯುಗಗಳಿಂದ ಇಲ್ಲಿ ಜನ್ಮ ತಳೆದ ಮಹಾಪುರುಷರು ತಾವು ನಡೆಸಿದ ಜೀವನದ ಮೂಲಕ ಸಂಸ್ಕೃತಿಯ ಸೌಧವನ್ನು ಕಟ್ಟಿದರು ಅವರ ಬದುಕೇ ಈ ಸೌಧದ ಒಂದೊಂದು ಇಟ್ಟಿಗೆಯಾಯಿತು.

ವೇದೋಪನಿಷತ್ತಿನ ಕಾಲದ ಸತ್ಯಕಾಮ, ಗುರು ಗೌತಮರ ಬಳಿ ವಿದ್ಯಾಭ್ಯಾಸಕ್ಕೆ ತೆರಳುತ್ತಾನೆ. ಗುರುಗಳು ಅವನ ಕುಲಗೋತ್ರದ ಬಗ್ಗೆ ಪ್ರಶ್ನಿಸಿದಾಗ ತನ್ನ ತಾಯಿಯು ಹಲವರ ಸೇವೆಯಲ್ಲಿ ನಿರತಳಾದಾಗ ನಾನು ಜನ್ಮ ತಳೆದೆ ಎಂದು ತಾಯಿಯೇ ತಿಳಿಸಿದ ಸಂಗತಿಯನ್ನು ಗುರುಗಳಿಗೆ ತಿಳಿಸಿದಾಗ, ತಾಯಿ-ಮಗನ ಸತ್ಯ ನಿಷ್ಠೆಯನ್ನು ಕೇಳಿ ತಿಳಿದ ಗುರುಗಳು, ಸತ್ಯಕಾಮನ ತಾಯಿಯಾದ ಜಾಬಾಲಿಯ ಹೆಸರಿನಿಂದಲೇ ಅವನ ಗೋತ್ರವನ್ನು ಗುರುತಿಸುತ್ತಾರೆ. ಸತ್ಯಕಾಮ ಜಾಬಾಲನು ವಿದ್ಯೆ ಕಲಿತು ಬ್ರಹ್ಮ ಜ್ಞಾನಿಯಾಗುತ್ತಾನೆ. ರಾಜ ಹರಿಶ್ಚಂದ್ರನ ಸತ್ಯ ನಿಷ್ಠೆಯಂತೂ ಲೋಕ ಪ್ರಸಿದ್ಧವಾದುದು. ಒಂದು ಸಾಧಾರಣ ಹಸು ಪುಣ್ಯಕೋಟಿಯೂ 'ಸತ್ಯವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾಪರಮಾತ್ಮನು' ಎನ್ನುತ್ತದೆ.

ರಘುಕುಲದ ರಾಜ ದಿಲೀಪನು ನಂದಿನಿ ಗೋವನ್ನು ರಕ್ಷಿಸಲು ಸಿಂಹದ ಬಾಯಿಗೆ ತಲೆಯೊಡ್ಡುವುದು, ಶಿಬಿ ಚಕ್ರವರ್ತಿಯು ಪಾರಿವಾಳದ ರಕ್ಷಣೆಗೆ ಶರೀರದ ಮಾಂಸ ಕತ್ತರಿಸುವ ಕಥೆ ಓದಿದರೆ ಭೂತದಯೆಯ ಗುಣದ ಅರಿವಾಗುತ್ತದೆ.

ಬಲಿಚಕ್ರವರ್ತಿಯು ತನ್ನ ಅಳಿವನ್ನು ಅರಿತೂ ವಾಮನನಿಗೆ ದಾನಮಾಡುವುದು. ಕರ್ಣನಂತೂ ದಾನಶೂರನೆಂದು ಹೆಸರು ಪಡೆಯುವುದು. ಬಾಹುಬಲಿಯು, ಗೆದ್ದ ಸಾಮ್ರಾಜ್ಯವನ್ನು ಭರತನಿಗೆ ಧಾರೆ ಎರೆಯುವುದು. ತ್ಯಾಗದ ಪರಮೋಚ್ಚ ಉದಾಹರಣೆಗಳು.

ಶ್ರೀ ರಾಮ ಸೀತೆಯರ ಬಾಳಂತೂ ಸಂಸ್ಕೃತಿಯ ಮೇರುಶಿಖರ.

ತಾಯಿ, ತಂದೆ, ಗುರು ಮತ್ತು ಅತಿಥಿಗಳಿಗೆ ದೈವ ಸ್ಥಾನವನ್ನು ನೀಡಿರುವುದು ಭಾರತೀಯ ಸಂಸ್ಕೃತಿಯಲ್ಲದೆ ಮತ್ತೆಲ್ಲಿ ಕಾಣಸಿಕ್ಕೀತು.

ಭಾರತದ ಮಹಾಕಾವ್ಯಗಳಾದ ರಾಮಾಯಣ ಮಹಾಭಾರತಗಳು ಈ ಮಣ್ಣಿನ ಸಂಸ್ಕೃತಿಯ ಸಾರಸರ್ವಸ್ವ. ಈ ಸಂಸ್ಕೃತಿಯು ಕೇವಲ ಕಾವ್ಯ ನಾಟಕಗಳಿಂದ ಮಾತ್ರ ಮೈದುಂಬಿಲ್ಲ. ಇಲ್ಲಿನ ಗಾದೆಗಳು, ಜನಪದ ಸಾಹಿತ್ಯ, ಸಂಗೀತ ಕಲೆ ನೃತ್ಯ ಎಲ್ಲದರಲ್ಲೂ ಅದು ಪ್ರತಿಬಿಂಬಿತವಾಗಿದೆ.

ಈ ಸಂಸ್ಕೃತಿಯ ಬೇರು ಧರ್ಮಾಚರಣೆಯಲ್ಲಿದೆ. ಅರ್ಥಕಾಮಗಳನ್ನು ಧರ್ಮಮಾರ್ಗದಲ್ಲೇ ಅನುಭವಿಸಿ, ಮೋಕ್ಷ ಫಲವನ್ನು ಪಡೆಯಬೇಕೆಂಬುದು ನಮ್ಮ ಸಂಸ್ಕೃತಿಯ ತಿರುಳು.

ಒಟ್ಟಾರೆ ಮಾನವನು ಬದುಕಿನಲ್ಲಿ ಯಾರ್‍ಯಾರ ಸಂಗತಿಗಳನ್ನು ಉತ್ತಮ ಯೋಗ್ಯ, ಸಾಮಾಜಿಕ ಸುಖವೆಂದು ಪರಿಭಾವಿಸಬಹುದೋ ಆ ಎಲ್ಲ ಸಂಗತಿಗಳು ಸಮನ್ವಯಗೊಂಡು ಸಂಸ್ಕೃತಿಯಾಗುತ್ತದೆ.

ಆದರೆ ಇಂದು ಆಧುನಿಕತೆಯ ಹೆಸರಿನಲ್ಲಿ ಸಂಸ್ಕೃತಿಯು ತನ್ನ ಅರ್ಥವನ್ನು ಕಳೆದುಕೊಳ್ಳುತ್ತಿದೆ. ಸಿನಿಮಾ ಹಾಡು, ಕುಣಿತಗಳು ಸಾಂಸ್ಕೃತಿಕ ಕಾರ್ಯಕ್ರಮಗಳಾಗುತ್ತವೆ. ಶಾಲೆಗಳಲ್ಲಿ ನಡೆಯುವ ಬಹುತೇಕ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮಕ್ಕಳು ಇದೇ ಬಗೆಯ ನೃತ್ಯ ಮಾಡುವುದು. ಕರ್ಣಕಠೋರ ನಾದವು ನಮಗೆ ಸಂಗೀತವೆನಿಸುತ್ತದೆ. ಕ್ರಿಕೇಟ್ ಕ್ರೀಡಾಂಗಣದ ಅರೆಬೆತ್ತಲೆ ಕುಣಿತವು ನೃತ್ಯವಾಗುತ್ತದೆ.

ಭಗವಂತನನ್ನು ಸತ್ಯಂ-ಶಿವಂ-ಸುಂದರಂ ಎಂದು ಆರಾಧಿಸಿದ ಸಂಸ್ಕೃತಿ ನಮ್ಮದು ಎಲ್ಲ ಕಲೆಗಳೂ ಆತ್ಮ ಸಂಸ್ಕಾರಕ್ಕಾಗಿ. ಜೀವನದ ಎಲ್ಲ ಮುಖಗಳೂ ಆತ್ಮ ಸಾಕ್ಷಾತ್ಕಾರ ಎಂದ ಸಂಸ್ಕೃತಿ ನಮ್ಮದು.

ಹೆಚ್. ನಾಗಭೂಷಣ ರಾವ್
ಪೋಷಕರು
ಕರ್ನಾಟಕ ರಾಜ್ಯ ಮಾಧ್ಯಮಿಕ
ಶಿಕ್ಷಕ ಸಂಘ



MAG(3)/NPP/23/2020-21 Registered No. RNI 45459/85 Posted at Bangalore PSO Bangalore -560 026
Date of Publishing : 17-05-2023 Date of Posting 20th or 21st of every month Posted at Periodical Rate

# ಪ್ರೌಢಶಾಲಾ ಶಿಕ್ಷಕರ ವೇತನ ವಿಳಂಬ – ಮನವಿ

ಅನುದಾನಿತ ಪ್ರೌಢಶಾಲಾ ಶಿಕ್ಷಕರ ವೇತನ ವಿಳಂಬಕ್ಕೆ ಸಂಬಂಧಿಸಿದಂತೆ ಶಾಲಾ ಶಿಕ್ಷಣ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ರೀತೇಶ ಕುಮಾರ್ ಸಿಂಗ್ ಅವರನ್ನು ಮತ್ತು ಆಯುಕ್ತರಾದ ಶ್ರೀ ಆರ್. ವಿಶಾಲ್ ಅವರನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚಿದಾನಂದ ಪಾಟೀಲ, ರಾಜ್ಯ ಖಜಾಂಚಿಗಳಾದ ಶ್ರೀ ಜೆ.ಎಂ.ಜೋಷಿ, ಬೆಂಗಳೂರು ಉತ್ತರ ಜಿಲ್ಲೆಯ ಅಧ್ಯಕ್ಷರಾದ ಮಲ್ಲಿಕಾರ್ಜುನ ಕೂಡಗಿ. ಜಿಲ್ಲಾ ಕಾರ್ಯದರ್ಶಿಗಳಾದ ಹರಿದಾಸ ಮತ್ತು ಉಪಾಧ್ಯಕ್ಷರಾದ ಶ್ರೀಮತಿ ಮಂಜು ರೂಪ ಅವರನ್ನು ಒಳಗೊಂಡ ಸಮಿತಿಯು ಭೇಟಿ ಮಾಡಿ, ರಾಜ್ಯದಲ್ಲಿ ಅನುದಾನಿತ ಪ್ರೌಢಶಾಲಾ ಶಿಕ್ಷಕರ ವೇತನ ವಿಳಂಬದ ಸಮಸ್ಯೆ ಯನ್ನು ಚರ್ಚೆ ಮಾಡಲಾಯಿತು. ಇಬ್ಬರು ಹಿರಿಯ ಅಧಿಕಾರಿಗಳು ಧನಾತ್ಮಕವಾಗಿ ಸ್ಪಂದಿಸಿದರು.



# ಕ್ರಾಂತಿವೀರ ಆಜಾದರ ಒಂದಾಣಿ

ಕ್ರಾಂತಿಕಾರಿ ಚಂದ್ರಶೇಖರ ಆಜಾದರು ಸ್ವಲ್ಪ ಸಮಯ ಬುಂದೇಲಖಂಡದ ಒಂದು ಕಂಪೆನಿಯಲ್ಲಿ ಚಾಲಕನಾಗಿ ದುಡಿಯುತ್ತಿದ್ದರು. ಸರಿಯಾಗಿ ಊಟ ಮಾಡಲೂ ಹಣ ಸಾಲುತ್ತಿರಲಿಲ್ಲ. ಕೆಲವೊಮ್ಮೆ ಕಡಲೆಕಾಳು ತಿಂದು ಹಸಿವೆ ನೀಗಿಸಬೇಕಾಗುತ್ತಿತ್ತು.

ಒಂದು ದಿನ ಚಂದ್ರಶೇಖರ ಆಜಾದರ ಬಳಿ ಕೇವಲ ಒಂದಾಣೆ ಮಾತ್ರ ಉಳಿದಿತ್ತು. ಅಂದು ದಿನವಿಡೀ ಏನೂ ತಿನ್ನಲಿಲ್ಲ. ಹಸಿದ ಹೊಟ್ಟೆಯಲ್ಲೇ ವಾಹನ ಚಲಾಯಿಸಿದರು. ಸಂಜೆಯಾಗುವ ಹೊತ್ತಿಗೆ ಹಸಿವೆ ತಡೆಯಲಾರದೆ ಕಂಗಾಲಾದರು. ದೂರದಲ್ಲಿ ಕಡಲೆ ಮಾರುವವ ಕಂಡ. ಒಂದಾಣೆಗೆ ಹುರಿದ ಕಡಲೆ ಕೊಂಡುಕೊಂಡರು. ಕಡಲೆಕಾಳು ತಿನ್ನುತ್ತಾ ಹೋಗುತ್ತಿದ್ದರು.

ಸ್ವಲ್ಪದರಲ್ಲೇ ಆ ಕಡಲೆಕಾಳುಗಳ ಮಧ್ಯೆ ಒಂದಾಣೆಯ ಒಂದು ನಾಣ್ಯ ಕೈಗೆ ತಾಗಿತು; ಅಚ್ಚರಿಯಾಯಿತು. ನಾಳೆಗೆ ಈ ಒಂದಾಣೆಯಿಂದ ಸುಧಾರಿಸಬಹುದು. ನಾಡಿದ್ದು ಮತ್ತೇನಾದರೂ ಮಾಡಿದರಾಯಿತು ಎಂದುಕೊಂಡರು. ಆದರೆ ಮನಸ್ಸು ಕೇಳಲಿಲ್ಲ– 'ಈ ಒಂದಾಣೆ ನನ್ನದಲ್ಲವಲ್ಲ, ಇದು ನಾನು ಶ್ರಮಪಟ್ಟು ಸಂಪಾದಿಸಿದ್ದಲ್ಲ. ಆ ಕಡಲೆ ಮಾರುವವ ಗಡಿಬಿಡಿಯಲ್ಲಿ ಹೀಗೆ ಮಾಡಿದ್ದಾನೆ' ಎಂದು ಕೊಂಡು ಅವನಲ್ಲಿಗೆ ವಾಪಸ್ಸು ಹೋದರು. 'ಏನಣ್ಣಾ, ನೀನು ಒಂದಾಣೆಯ ಕಡಲೆಯನ್ನು ಕೊಟ್ಟು, ಅದರಲ್ಲಿ ಒಂದಾಣೆಯ ನಾಣ್ಯವನ್ನೂ ಹಾಕಿದ್ದೀಯಲ್ಲ. ಹೀಗೆ ಮಾಡಿದರೆ ನಿನಗೆ ನಷ್ಟವಾಗುವುದಿಲ್ಲವೇ?' ಎನ್ನುತ್ತಾ ಆ ಒಂದಾಣೆಯನ್ನು ಆತನ ಕೈಯಲ್ಲಿಟ್ಟು ಹೊರಟರು. ಕಡಲೆ ಮಾರುವವನು 'ಇಂಥವರೂ ಇದ್ದಾರೆಯೇ?' ಎಂದುಕೊಂಡು ದಂಗಾದ.

ಬಡತನದಲ್ಲಿದ್ದರೂ ಆಜ಼ಾದರು ಪ್ರಾಮಾಣಿಕತೆಯನ್ನು ಬಿಡಲಿಲ್ಲ.

ಕೃಪೆ : ಕೈತುತ್ತು

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

**D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು.**

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com